# ಅಧ್ಯಾಯ ನಾಲ್ಕು

# ಮೈಸೂರು ಜಿಲ್ಲೆಯ ವೀರಶೈವ ಮಠಗಳ ಧಾರ್ಮಿಕ ಮತ್ತು ಸಾಮಾಜಿಕ ಕೊಡುಗೆ

# ಅಧ್ಯಾಯ – ೪

## ಮೈಸೂರು ಜಿಲ್ಲೆಯ ವೀರಶೈವ ಮಠಗಳ ಧಾರ್ಮಿಕ ಮತ್ತು ಸಾಮಾಜಿಕ ಕೊಡುಗೆ

ಪ್ರಪಂಚದ ಚರಿತ್ರೆಯ ಪುಟಗಳನ್ನು ತಿರುವಿಹಾಕಿ ನೋಡಿದಾಗ ಅನೇಕ ಪೂಜ್ಯರು ಅವತರಿಸಿ ಮಾನವನಲ್ಲಿರುವ ರಾಕ್ಷಸಿ ಪ್ರವೃತ್ತಿಯನ್ನು ತೊಲಗಿಸಿ ಧರ್ಮ ಜಾಗೃತಿಯನ್ನುಂಟು ಮಾಡಿರುವುದು ಕಂಡು ಬರುತ್ತದೆ. ಹನ್ನೆರಡನೇಶತಮಾನದಲ್ಲಿ ಬಸವಾದಿ ಪ್ರಮಥರು ಬೋಧಿಸಿ, ಆಚರಿಸಿ ತೋರಿಸಿದ ವಿಶ್ವಮಾನವತತ್ವಗಳು ಆಧ್ಯಾತ್ಮಿಕ ತಳಹದಿಯ ಮೇಲೆ ಸರ್ವರಲ್ಲಿಯೂ ಸಮಾನತೆಯನ್ನು ಸ್ಥಾಪಿಸುವುದು. ಕಾಯಕ–ದಾಸೋಹ ತತ್ವಗಳ ಮೂಲಕ ಡಾಂಭಿಕತೆ, ಮೂಢನಂಬಿಕೆ, ಹೋಗಲಾಡಿಸುವುದು ವೈಚಾರಿಕತೆಯ ಜೊತೆಗೆ ಮಹಿಳಾ ಸಮಾನತೆಯ ವಿಚಾರಗಳ ಬಗ್ಗೆ ಸಮಾಜವನ್ನು ಎಚ್ಚರಿಸುತ್ತಲೆ ಬಂದಿದ್ದಾರೆ.

ಸಮಾಜದಲ್ಲಿನ  ಅನಿಷ್ಟ ಪದ್ಧತಿಗಳನ್ನು ತಿದ್ದಿ ಜನತೆಯನ್ನು ಸನ್ಮಾರ್ಗಕ್ಕೆ ತರುವುದರಲ್ಲಿ ಮಠಗಳ ಪಾತ್ರ ತುಂಬಾ ಮಹತ್ತರವಾದುದು. ಈ ದಿಶೆಯಲ್ಲಿ ವೀರಶೈವ ಮಠಗಳು ಶತಶತಮಾನಗಳಿಂದಲೂ ಜನತೆಗೆ ಬೌದ್ಧಿಕ ಮತ್ತು ಪಾರಮಾರ್ಥಿಕ ಬಾಳನ್ನು ತಿದ್ಧಿ, ಮಾನವನ ಕಲ್ಯಾಣಕ್ಕೆ ಮೀಸಲಾಗಿರುವುದನ್ನು ನಾವು ಗಮನಿಸಬಹುದು. ಅಕ್ಷರಜ್ಞಾನ, ನೈತಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಶಿಕ್ಷಣವನ್ನು ಕೊಡುವ ಕಾರ್ಯವನ್ನು ಪ್ರತಿ ಹಳ್ಳಿ ಹಳ್ಳಿಯಲ್ಲೂ ಇರುವ ಮಠಗಳು ಮಾಡುತ್ತಲೆ ಬಂದಿವೆ. ಅಂಥ ಮಠಗಳಲ್ಲಿ ಶ್ರೀ ಸಿದ್ಧಗಂಗಮಠ, ಕನಕಪುರದದೇಗುಲಮಠ, ಸಿರಿಗೆರೆತರಳಬಾಳುಬೃಹನ್ಮಠ, ಹುಬ್ಬಳ್ಳಿಯ ಮೂರುಸಾವಿರಮಠ ಮುಂತಾದವು ಸೇರಿವೆ. ಮೈಸೂರು ಪ್ರಾಂತ್ಯಕ್ಕೆ ಸೇರಿದಂತೆ ಪ್ರಸಿದ್ಧವಾದ ಸುತ್ತೂರುಮಠ,  ದೇವನೂರುದಾಸೋಹಮಠ, ಶ್ರೀಹೊಸಮಠ, ಮಲ್ಲನಮೂಲೆ ಮಠ, ಮಾಡ್ರಳ್ಳಿಮಠ, ಶ್ರೀ ವಾಟಾಳುಮಠ ಇನ್ನು ಹಲವಾರು ಮಠಗಳು ಈ ಕಾಯಕವನ್ನು ನಿರಂತರವಾಗಿ ನಡೆಸುತ್ತ ಸಮಾಜದಲ್ಲಿನ ರಜೋಗುಣ ಹೋಗಲಾಡಿಸುವತ್ತ ಗಮನ ಕೇಂದ್ರೀಕರಿಸಿದೆ.

ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಸಮಾಜದಲ್ಲಿ ಬದಲಾವಣೆಗೆ ನೈತಿಕಮೌಲ್ಯ ಗುಣಾತ್ಮಕ ಜೀವನ ಮುಂತಾದ ಬದುಕಿನ ಮಾನವೀಯ ಮೌಲ್ಯಗಳ ಭಿತ್ತರಿಸುವ ಮತ್ತು ಆಚರಿಸುವ ಕಾರ್ಯವನ್ನು ಯಶಸ್ವಿಯಾಗಿ ಈ ಮಠಗಳು ಮಾಡುತ್ತಿರುವುದು ಕಂಡುಬರುತ್ತಿದೆ. ಯಾವುದೇ ಒಂದುದೇಶ ಬಲಿಷ್ಠವಾಗಿ ಸದೃಢವಾಗಬೇಕಾದರೆ ಅದು ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನಾಲ್ಕು ಮುಖಗಳಲ್ಲಿಯೂ ಅಭಿವೃದ್ಧಿಯನ್ನು ಹೊಂದಬೇಕಾಗುತ್ತದೆ. ಇವುಗಳ ಒಂದಕ್ಕೊಂದು ಸಮತೋಲನ ಕಾಪಾಡಿಕೊಂಡು ಹೋದಾಗ ಮಾತ್ರ ಸ್ವಸ್ಥಸಮಾಜ ನಿರ್ಮಾಣವಾಗಿರುತ್ತದೆ. ಇಲ್ಲದೆ ಹೋದರೆ ನಮ್ಮ ಜೀವನದ,

ಸಮಾಜದಗತಿಯೇ ಬದಲಾಗಿಬಿಡುತ್ತದೆ. ಆದ ಕಾರಣ ನಾವು ಹಾಗಾಗಿ ನಮ್ಮ ಧಾರ್ಮಿಕ ಮತ್ತು ಸಾಮಾಜಿಕ ಪರಂಪರೆಗಳ ಕಡೆಗೆ ಸಿಂಹಾವಲೋಕನ ಮಾಡುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಪಾಪಬೀತಿ, ಧರ್ಮಶ್ರದ್ಧೆಯಿಲ್ಲದೆ ಹೆಚ್ಚುಹೆಚ್ಚು ತಪ್ಪು ಮಾಡುವುದು ಮಾನವನಸಹಜವಾದ ಗುಣವಾಗಿರುವುದರಿಂದ ಮನಸ್ಸು ತಂತಾನೆ ಧಾರ್ಮಿಕ ಮತ್ತು ಸಾಮಾಜಿಕ ಚಿಂತನೆಗಳಿಗೆ ತೊಡಗುವುದುಂಟು.

ಈ ನಿಟ್ಟಿನಲ್ಲಿ ಧರ್ಮಕ್ಕೆ ದಕ್ಕೆ ಬಂದಾಗಲೆಲ್ಲಾ ಯುಗಯುಗಾಂತರಗಳಲ್ಲಿ ನಾನು ಧರ್ಮೋದ್ಧಾರಕ್ಕಾಗಿ ಉದಯಿಸಿ ಬರುತ್ತೇನೆ ಎಂಬ ಗೀತಾಚಾರ್ಯನ ಉವಾಚವಿರುವಂತೆಯೇ, ಪರಶಿವನ ಪಂಚಮುಖಗಳಿಂದ ಜನಿಸಿ ಪಂಚತತ್ವಗಳಿಗೆ ಅಧಿಕಾರಿಗಳೆನಿಸಿದ ಪಂಚಾಚಾರ್ಯರು ಯುಗಯುಗಾಂತರಗಳಲ್ಲಿ ಅವತರಿಸಿ ಧರ್ಮೋದ್ಧಾರ ಮಾಡುವರೆಂಬ ನಂಬಿಕೆ ಶೈವರಲ್ಲಿ ಇರುವುದನ್ನು ನಾವು ಗಮನಿಸಬಹುದು. ಈ ಕಾರ್ಯವನ್ನು ಧರ್ಮವನ್ನು ಉಳಿಸಲು ಸಮಾಜವನ್ನು ಶುದ್ಧೀಕರಿಸಲು ನಮ್ಮ ಮಠಮಾನ್ಯಗಳು ಪುರಾತನ ಕಾಲದಿಂದಲೂ ಶ್ರಮಿಸುತ್ತಿವೆ.

ಇತ್ತೀಚೆಗೆ ಜನರಲ್ಲಿ ಧಾರ್ಮಿಕ ಅಂದಾನುಕರಣೆ ಮೌಢ್ಯತೆ ಜಾಸ್ತಿಯಾಗಿ ನೈತಿಕಮೌಲ್ಯಗಳು ಕಣ್ಮರೆಯಾಗಿವೆ. ಅದಲ್ಲದೆ ಸಾಮಾಜಿಕವಾಗಿ ಮಾನವರಲ್ಲಿ ನಂಬಿಕೆ, ಸತ್ಯ, ಅಹಿಂಸೆ ಮತ್ತು ಧಾನ-ಧರ್ಮಗಳು ನಾಶವಾಗಿವೆ ಇಂಥ ವಿಪ್ಲವ ಕಾಲದಲ್ಲೂ ನಮ್ಮ ಮಠಗಳು ಮನುಷ್ಯನಲ್ಲಿನ ಮೃಗೀಯ ಗುಣವನ್ನು ಹೋಗಲಾಡಿಸಿ ಧಾರ್ಮಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸೂಕ್ತ ವಾತಾವರಣ ಕಲ್ಪಿಸಿ ಹಂಚಿತಿನ್ನುವ ಸಹಬಾಳ್ವೆ ಮಾಡುವ ದಾಸೋಹ ಕಲ್ಪನೆ, ಕಾಯಕದ ಕಲ್ಪನೆಗಳಲ್ಲಿ ಮೂಡಿಸುವಲ್ಲಿ ಜಾಗೃತವಾಗಿವೆ.

ವೀರಶೈವ ಮಠಗಳು ಸಮಾಜದ ಅವಿಭಾಜ್ಯ ಅಂಗಗಳಾಗಿ ಸಮಾಜದ ಸದಸ್ಯರೊಡನೆ ವಿವಿಧ ಸಂಬಂಧಗಳನ್ನು ಹೊಂದಿದ್ದವು. ಸಾಮಾಜಿಕ ಜೀವನವು ವಿಕಾಶವಾಗುತ್ತಾ ಹೋದಂತೆ ವೀರಶೈವ ಮಠಗಳ ಕಾರ್ಯಕ್ಷೇತ್ರವು ಬೆಳೆಯುತ್ತಾ ಹೋಯಿತು. ವೀರಶೈವ ಮಠಗಳು ಇಂದಿಗೂ ಸಮಾಜದಲ್ಲಿ ವಹಿಸುತ್ತಿರುವ ಪಾತ್ರವು ಸರ್ವವಿಧಿತವಾಗಿದೆ. ಆರಂಭದಲ್ಲಿ ಈ ವೀರಶೈವ ಮಠಗಳ ಕಾರ್ಯಕ್ಷೇತ್ರವು ಬಹುತೇಕವಾಗಿ ಧಾರ್ಮಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿತ್ತು. ಸ್ವಯಂ ಪೂರ್ಣ ಸಮಾಜವು ಸರಳವಾದ ಜೀವನವಿದ್ದಾಗ ಮಾತ್ರ ಸಾಧ್ಯ. ಜನರ ಬಯಕೆಗಳು ಹೆಚ್ಚಿದಂತೆ, ಲೌಕಿಕ ಜೀವನದ ಅಗತ್ಯತೆಗಳು ಬೆಳೆದಂತೆ, ಸಾಮಾಜಿಕ ಜೀವನವು ಸಂಕೀರ್ಣವಾಯಿತು. ಹೀಗೆ ಸಾಮಾಜಿಕ ಜೀವನವು ಸರಳತೆಯಿಂದ ಸಂಕೀರ್ಣತೆಗೆ ವಿಕಾಸವಾದಂತೆ, ವೀರಶೈವ ಮಠಗಳ ಕಾರ್ಯಕ್ಷೇತ್ರದ ವಿಕಾಸವನ್ನು ನಾವು ಗಮನಿಸಬಹುದು.

"ವೀರಶೈವ ಮಠಗಳ ಕಾರ್ಯಗಳನ್ನು ನಿರೂಪಿಸುವ ಮೊದಲು ಅವುಗಳ ಪಾರಂಪರ್ಯದ ವಿಚಾರವಾಗಿ ಕೆಲವು ವಿಷಯಗಳನ್ನು ಗ್ರಹಿಸುವುದು ಅಗತ್ಯ. ವೀರಶೈವ ಮಠಗಳ ಪಾರಂಪರ್ಯವು, ಹಿಂದೂ ರಾಷ್ಟ್ರದಲ್ಲಿ ವಿವಿಧ ಧರ್ಮಗಳಲ್ಲಿದ್ದ ಮಠಗಳ ವ್ಯವಸ್ಥೆಗೆ ಸಂಬಂಧವನ್ನು ಹೊಂದಿದೆ. ಮಠಗಳು ಸಂನ್ಯಾಸಿಗಳ ವಾಸಸ್ಥಳಗಳಾಗಿದ್ದವು. ಮಠಗಳ ಉಗಮವನ್ನು ಗಮನಿಸಿದರೆ ಮಠಕ್ಕೂ ಆಧ್ಯಾತ್ಮಯೋಗ ಮತ್ತು ವೈರಾಗ್ಯಗಳಿಗೆ ಇರುವ ನಿಕಟ ಸಂಬಂಧವು ಕಂಡುಬರುತ್ತದೆ. ಮಠಗಳನ್ನು ಆಂಗ್ಲಭಾಷೆಯಲ್ಲಿ 'ಮೊನೆಸ್ಟರಿಸ್' [Monasteries] ಎಂದು ಕರೆಯುತ್ತಾರೆ. ಇಂಗ್ಲೀಷ್ ಶಬ್ದದ ಮೂಲವಾದ ಗ್ರೀಕ್ ಶಬ್ದವನ್ನು ಗಮನಿಸಿದರೆ ಇದರರ್ಥ ಏಕಾಂತತೆ-ವಿವಕ್ತತೆ-ಪ್ರಪಂಚದ ಬಂಧನಗಳಿಂದ ಹೊರೆತಾಗಿ, ಏಕಾಗ್ರಚಿತ್ತದಿಂದ ಧ್ಯಾನದಲ್ಲಿ ನಿರತವಾಗಲು ಏಕಾಂತತೆಯು ಅಗತ್ಯವೆಂಬ ಭಾವನೆ ಎಲ್ಲಾ ಧರ್ಮಗಳಲ್ಲಿಯೂ ಮೂಡಿಬಂದಿದೆ."[೧] ಮಠದಲ್ಲಿರುವ ಯತಿಗಳು ಪ್ರಾಪಂಚಿಕ ಜೀವನದಿಂದ ಹೊರಗಿದ್ದರೂ ಸನ್ಯಾಸಿಗಳಿಗೆ ಸಾಮಾಜಿಕ ಸಂಬಂಧಗಳಿದ್ದುವೆಂಬುದನ್ನು ಮರೆಯಬಾರದು. ಸಂನ್ಯಾಸಿಗಳೂ ಒಟ್ಟಿಗೆ ಇರಬೇಕಾದುದರಿಂದ ಅಗತ್ಯವಾಗಿ ಇರಬೇಕಾದ ಗುಣ ಸಹನೆ ಎಂಬುದು ನಿರ್ವಿವಾದ. ಪ್ರಾಪಂಚಿಕ ಬಂಧನಗಳು ಧಾರ್ಮಿಕ ಜೀವನಕ್ಕೆ, ಆಧ್ಯಾತ್ಮಿಕ ಅನುಭವಕ್ಕೆ ಅಡಚಣೆಯನ್ನುಂಟುಮಾಡುತ್ತವೆಂಬ ಭಾವನೆಯು ಪ್ರಪಂಚದ ಎಲ್ಲಾ ಧರ್ಮಗಳ ಅನುಯಾಯಿಗಳಲ್ಲಿತ್ತು. ಇದರ ಅತಿರೇಕವೇ ಶರೀರಕ್ಕೆ ಆದಷ್ಟು ಹಿಂಸೆಯನ್ನು ಕೊಟ್ಟಷ್ಟು ಪರಮಾತ್ಮನ ಸಾನಿಧ್ಯ, ಸಾಮೀಪ್ಯ ಪಡೆಯಬಹುದೆಂಬ ಭಾವನೆಗೆ ಎಡೆಕೊಟ್ಟಿತ್ತು. ಬುದ್ಧನೂ ಅನೇಕ ವರ್ಷಗಳು ಶರೀರವನ್ನು ಅಲಕ್ಷಿಸಿ ಅದಕ್ಕೆ ಹಿಂಸೆಯಾಗುವ ರೀತಿಯಲ್ಲಿ ವರ್ತಿಸಿದನು. ಆದರೆ ಕ್ರಮೇಣ ಅದುನಿಷ್ಪ್ರಯೋಜನವೆಂಬ ಅರಿವುಬಂದಿತು. ಬೌದ್ಧಧರ್ಮದಲ್ಲಿ ಶರೀರವನ್ನು ಸ್ವಚ್ಛವಾಗಿ ಆರೋಗ್ಯವಾಗಿಡಬೇಕೆಂಬ ಭಾವನೆಯಿದೆ. ಬೆಳಕನ್ನು ಕೊಡುವ ದೀಪವನ್ನು ಸ್ವಚ್ಛವಾಗಿಟ್ಟರಲ್ಲವೇ, ನಮಗೆ ಪ್ರಕಾಶಮಾನವಾದ ಬೆಳಕುಬರುವುದು ಆದ್ದರಿಂದ ಶರೀರವನ್ನು ಸ್ವಚ್ಛವಾಗಿಟ್ಟು ಆರೋಗ್ಯವನ್ನು ಕಾಪಾಡಿಕೊಳ್ಳುವುದು ಆದ್ಯಕರ್ತವ್ಯ. ಈ ಜ್ಞಾನವನ್ನೀಯುವ ದೀವಿಗೆಯನ್ನು ಸ್ವಚ್ಛವಾಗಿಡದಿದ್ದರೆ ಮನಸ್ಸು ಮತ್ತು ಬುದ್ಧಿ ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಗದು. ವೀರಶೈವ ಧರ್ಮದಲ್ಲಿ ಕಾಯಕಕ್ಕೆ ಇರುವ ಮಹತ್ವದ ಸ್ಥಾನವನ್ನು ನಾವಿಲ್ಲಿ ಗಮನಿಸಬಹುದು. ಸಂನ್ಯಾಸಿಗೂ ಸಹ ಕಾಯಕದ ಅಗತ್ಯವಿದೆ. 'ಕಾಯಕ' ಎಂಬ ಶಬ್ಧವೇ ಸೂಚಿಸುವಂತೆ, ಪ್ರತಿಯೊಬ್ಬ ಮನುಷ್ಯನಿಗೂ ಒಂದಲ್ಲ ಒಂದು ರೀತಿಯ ಶರೀರದ ಕಾರ್ಯದ ಅವಶ್ಯಕತೆ ಇದೆ ಆಗಲೇ ಆತನ ವ್ಯಕ್ತಿತ್ವ ಉತ್ತಮವಾಗುವುದು.

---------------

೧, ಅರ್ಚನಾ, ಮಲ್ಲೇದೇವರು, ಪು.೯೮-೯೯

ಬೌದ್ಧ ಧರ್ಮದಲ್ಲಿದ್ದಂತೆ ಸನ್ಯಾಸಿಗೆ ಕಂತಭಿಕ್ಷೆಮಾಡುವ ವ್ಯಕ್ತಿ ಯಾವುದೇ ಜಾತಿಮತಕ್ಕೆ ಸೀಮಿತವಾಗಿರುವುದಿಲ್ಲ. ಯಾವುದೇ ಜಾತಿಯವನಾಗಿದ್ದರೂ ಲಿಂಗಾಧಾರಣೆಯಾದನಂತರ ಆತನಿಗೆ ಜಾತಿಯಿಲ್ಲ. ವೀರಶೈವ ಮಠಗಳು ವಿದ್ಯಾಪೀಠಗಳಾಗಿ, ಧಾರ್ಮಿಕ ಮತ್ತು ಲೌಕಿಕ ವಿದ್ಯೆಗಳನ್ನು ಬೋಧಿಸುವ ಕೇಂದ್ರಗಳಾಗಿದ್ದವು. ಹೀಗೆ ಬೌದ್ಧಮಠಗಳಿಂದ ಸ್ಫೂರ್ತಿ ಪಡೆದಿರುವುದನ್ನು ಕಾಣಬಹುದು. ವೀರಶೈವ ಮಠಗಳಲ್ಲಿಯ ಸನ್ಯಾಸಿಯು ವೈಯಕ್ತಿಕವಾಗಿ ಆ ಮಠದ ಸ್ವಾಮಿಗೆ ಆಸ್ತಿಯ ಮೇಲೆ ಯಾವ ಹಕ್ಕು ಇರುವುದಿಲ್ಲ ಆದರೆ ಮಠದ ಸಂಪತ್ತನ್ನು ಸಾರ್ವಜನಿಕ ಹಿತಕ್ಕಾಗಿ ಉಪಯೋಗಿಸುವ ಉದ್ದೇಶದಿಂದ ಆತನು ಮಠದ ಸಂಪತ್ತಿನ ಒಡೆಯನಾಗಿರುವುದು ಕಂಡುಬರುತ್ತದೆ. ಆತನು ಒಂದು ರೀತಿಯಲ್ಲಿ ಸಮಾಜದ ಆಸ್ತಿಯ ವಾರಸುದಾರ.

**ಧಾರ್ಮಿಕ ಕೊಡುಗೆ**

“ಧರ್ಮ ಎಂದರೆ ಕೂಡಲೆ ಅದರ ಅರ್ಥದ ಪರಿಕಲ್ಪನೆಗಳು ಮನದಲ್ಲಿ ಮೂಡುವುದಾದರು ಅದನ್ನು ಖಚಿತವಾದ ಶಬ್ದಗಳಲ್ಲಿ ನಿಖರವಾಗಿ ಹಿಡಿದಿಡುವುದು ಇನ್ನು ಸಾಧ್ಯವಾಗಿಲ್ಲ. ಧರ್ಮ ದೇವರುಗಳ ಬಗ್ಗೆ ಪ್ರಥಮಕಲ್ಪನೆ ಮೂಡಿಸಿಕೊಂಡ ಆದಿಮಾನವನಲ್ಲಿದ್ದ ನಂಬಿಕೆ ಮತ್ತು ಗೊಂದಲಗಳನ್ನು ಇಂದಿನ ಸಂಕೀರ್ಣವಾದ ಸಮಾಜದಲ್ಲಿ ಕಾಣಬಹುದಾಗಿದೆ. ಸರ್ವಚೇತನವಾದ, ಪ್ರಕೃತಿವಾದ, ಶಕ್ತಿವಾದ, ಬಹುದೇವತಾವಾದ ಮತ್ತು ಏಕ ದೇವತಾ ವಾದಗಳಂತಹ ಪರಿಕಲ್ಪನೆಗಳು, ಧಾರ್ಮಿಕ ಪರಿಭಾವನೆಗಳು ಬೆಳೆದು ಬಂದರೀತಿಯನ್ನು ವಿವರಿಸಲು ಯತ್ನಿಸುತ್ತವೆ. ದೇವರನ್ನು ಪರಿಭಾವಿಸುವ ಮತ್ತು ಅರ್ಥೈಸುವ ರೀತಿಯಲ್ಲಿ ಮಾತ್ರ ಭಿನ್ನವಾಗುವ ಈ ಧರ್ಮಗಳು ಮಾನವನ ನೈತಿಕ ಜೀವನಕ್ಕೆ ಒತ್ತುಕೊಟ್ಟು ಅವನ ಅಂತರಂಗದ ಅನಿಸಿಕೆ ನಂಬಿಕೆಗಳನ್ನು ಸಂಯೋಜಿಸಿ ಸಾಮಾಜಿಕ ಬದುಕಿಗೆ ವಿಶಿಷ್ಟತೆ ಒದಗಿಸುತ್ತದೆ.”[೨] ಇಂಥಾ ಕಾರಣಗಳಿಂದ ಮಾನವನ ಹುಟ್ಟಿನಿಂದ ಬಂದ ಅಥವಾ ತನಗೆ ಸರಿ ಎನ್ನಿಸಿದ ಧರ್ಮವನ್ನು ಒಪ್ಪಿಕೊಂಡು ಅನುಸರಿಸುತ್ತಾನೆ.

ಮೈಸೂರು ಜಿಲ್ಲೆಯಲ್ಲಿ ಅಪಾರವಾಗಿರುವ ಹೆಸರಾಂತ ವೀರಶೈವ ಮಠಗಳು ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ನೀಡಿರುವ ಕೊಡುಗೆ ಅನನ್ಯವಾದುದು. ಇತಿಹಾಸ ಪ್ರಸಿದ್ಧವಾದ ಈ ಜಿಲ್ಲೆಯಲ್ಲಿ ಒಟ್ಟು ಏಳು ತಾಲ್ಲೂಕುಗಳಿದ್ದು ಧರ್ಮಪ್ರಚಾರದಲ್ಲಿ ಧಾರ್ಮಿಕಕ್ಷೇತ್ರದಲ್ಲಿ ಅದರದ್ದೆ ಆದ ಕೊಡುಗೆಯನ್ನು ಈ ಮಠಮಾನ್ಯಗಳು ನೀಡಿವೆ. ಸಾಮೂಹಿಕ ಧೀಕ್ಷೆ ನೀಡಿ ಸಮಾಜದಲ್ಲಿನ ಮೇಲು ಕೀಳಿನ ಅಂತರ ಕಡಿಮೆ ಮಾಡಲು ಕಾರ್ಯಕ್ರಮ ನಡೆಸಿವೆ ಅಲ್ಲದೆ ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವಂಥ ಹಬ್ಬ

---

೨, ನಂಜನಗೂಡು ತಾಲ್ಲೂಕು, ಗಜೆಟಿಯರ್, ಪು. ೪೦

ಹರಿದಿನಗಳನ್ನು ಮಠಾಧಿಪತಿಗಳ ಸಮ್ಮುಖದಲ್ಲಿ ಜಾತಿಮತ ಬೇಧವಿಲ್ಲದೆ ಆಚರಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಈ ಮೂಲಕ ಈ ಪ್ರಾಂತ್ಯದ ಜನರಲ್ಲಿ ಸೌಹಾರ್ದಯುತ ಭಾವನೆ ಬೆಳೆಸುತ್ತಿವೆ ಎಂಬುದನ್ನು ನಾವು ಗಮನಿಸಬಹುದು. ಈ ಜಿಲ್ಲೆಯಲ್ಲಿ ಐತಿಹಾಸಿಕವಾಗಿ ಪ್ರಸಿದ್ಧವಾಗಿರುವ ಮಠಗಳು ತಮ್ಮದೆ ಆದಂತಹ ಆಚರಣೆಯನ್ನು ಹಿರಿಯ ಶ್ರೀಗಳ ಜಯಂತಿ ಮತ್ತು ಆರಾಧನಉತ್ಸವಗಳು ಇದರ ಸ್ಮರಣಾರ್ಥ ನಡೆಸುವ ರಕ್ತದಾನ ಶಿಬಿರ, ಆರೋಗ್ಯತಪಾಸಣಾ ಶಿಬಿರ ಇತರ ಸೇವೆಗಳ ಮೂಲಕ ಆ ಕಾಲದ ಧಾರ್ಮಿಕ ಸಂಸ್ಕೃತಿಯನ್ನು ಮುನ್ನಡೆಸುವ ಕೆಲಸವನ್ನು ಮಾಡುತ್ತಿವೆ. ಇದಲ್ಲದೆ ಇನ್ನು ಕೆಲವು ಮಠಗಳಲ್ಲಿ ನಡೆದಿರುವಂತಹ ಪವಾಡಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಹಾಗೆ ಉಳಿದಿವೆ ಅವರು ಮಾಡುವ ಕಾಯಕತತ್ವ ಧರ್ಮ ಪ್ರಚಾರದ ಜೊತೆಗೆ ಅನೇಕ ಮಠಾಧೀಶರುಗಳು ಸಾರ್ವಜನಿಕರ ಒಳಿತಿಗಾಗಿ ಜನರ ಸಮ್ಮುಖದಲ್ಲಿ ನಾನಾ ರೀತಿಯ ಪವಾಡಗಳನ್ನು ಮಾಡಿದ್ದಾರೆ. ಇಂತಹ ಅನೇಕ ದಂತಕತೆಗಳು ಇತಿಹಾಸದ ಪುಟ ಸೇರಿರುವುದು ನಮ್ಮ ಗಮನಕ್ಕೆ ಬಂದಿದೆ. ಜನತೆಗೆ ಧರ್ಮ ಮತ್ತು ಆಧ್ಯಾತ್ಮಕೇಂದ್ರಗಳಿಗೆ ಭೇಟಿನೀಡುವ ಮತ್ತು ಆಸಕ್ತಿ ಇರುವವರಿಗೆ ಧರ್ಮದ ಅರಿವುಳ್ಳವರಿಗೆ ನಮ್ಮ ಕಲೆಸಂಸ್ಕೃತಿಯನ್ನು ತಿಳಿಸುವ ಹಿನ್ನೆಲೆಯಲ್ಲಿ ಪ್ರವಾಸಗಳನ್ನು ಏರ್ಪಡಿಸುವುದನ್ನು ಕಾಣಬಹುದು. ಈ ಮೂಲಕ ಸಾರ್ವಜನಿಕರಲ್ಲಿ ಧಾರ್ಮಿಕ ಮನೋಭಾವ ಮೂಡಲು ಮಠಗಳು ಕಾರ್ಯನಿರ್ವಹಿಸುತ್ತಿರುವುದನ್ನು ನಾವು ಗಮನಿಸಬಹುದು.

ಕರ್ನಾಟಕದಲ್ಲಿ ಅತ್ಯಂತ ಪ್ರಭಾವಿ ಮತ್ತು ಜನಸಂಖ್ಯೆಯಲ್ಲಿ ಹೆಚ್ಚಿರುವ ವೀರಶೈವರ ಧರ್ಮ ಇಂದು ಉನ್ನತಚಿಂತನೆ, ಆಲೋಚನೆ, ಸನಾತನಪರಂಪರೆ ಉಳಿಯಲುಕಾರಣ ಇಲ್ಲಿರುವ ವೀರಶೈವಮಠಗಳೇ ಎಂಬುದು ನಿರ್ವಿವಾದ. ಹನ್ನೆರಡನೇ ಶತಮಾನದಿಂದ ಆರಂಭವಾದ ಮಠಸಂಸ್ಕೃತಿ ಮುಂದೆ ಹದಿನೈದು ಹದಿನಾರಲ್ಲಿ ಸಿದ್ಧಲಿಂಗೇಶ್ವರರ ಮೂಲಕ ಹರಡಿ ಇಂದು ವಿಶಾಲ ಕರ್ನಾಟಕದಲ್ಲಿ ಕಲೆ ಸಂಸ್ಕೃತಿಯನ್ನು ಉಳಿಸುವ ಕೆಲಸದ ಜೊತೆ ಸಮಾಜೋಧಾರ್ಮಿಕ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿವೆ.ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮಠಮಾನ್ಯಗಳಿಗೆ ಅದರದೆ ಆದಂತಹ ಧರ್ಮ ಪ್ರಚಾರ, ಸಾಮಾಜಿಕ ಹೊಣೆಗಾರಿಕೆ ಇದೆ. ಈಹಿನ್ನೆಲೆಯಲ್ಲಿ ಕೆಲವು ಮಠಮಾನ್ಯಗಳು ಸಲ್ಲಿಸಿದ ಸೇವೆ ಚಾರಿತ್ರಿಕವಾದುದು. ಅಂತವುಗಳಲ್ಲಿ ಮೈಸೂರು ಜಿಲ್ಲೆಯ ಕೆಲವು ಪ್ರಸಿದ್ಧ ಮಠಗಳು ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಅಪಾರ ಕೊಡುಗೆ ನೀಡುತ್ತಾ ಬಂದಿವೆ. ಶ್ರೀಸುತ್ತೂರು ಮಠ, ಶ್ರೀ ದೇವನೂರು ಮಠ, ಶ್ರೀ ಹೊಸಮಠ ಅವುಗಳಲ್ಲಿ ಪ್ರಮುಖವಾದವು.

**ಹೊಸಮಠದ ಧಾರ್ಮಿಕ ಮತ್ತು ಸಾಮಾಜಿಕ ಕೊಡುಗೆ :**

ನಾಲ್ಕು ಶತಮಾನಗಳಷ್ಟು ಇತಿಹಾಸವುಳ್ಳ ತಮ್ಮ ಮಠದ ಗುರುಪರಂಪರೆಯವರು ಎಂದಿನಿಂದಲೂ ರೂಢಿಸಿ ಆಚರಿಸುತ್ತ ಬಂದಿರುವ ಧರ್ಮ ಸಂಸ್ಕೃತಿ ಪರವಾದ ಚಟುವಟಿಕೆ ಕಾರ್ಯಗೌರವಗಳನ್ನು ಪ್ರಸ್ತುತ ಹೊಸಮಠದ ಪೀಠಾಧ್ಯಕ್ಷರಾಗಿರುವ ಪೂಜ್ಯಶ್ರೀ ಚಿದಾನಂದ ಸ್ವಾಮಿಗಳವರು ತಾವು ೧೯೮೪ರಲ್ಲಿ ಸ್ಥಾಪಿಸಿರುವ ಶ್ರೀ ನಟರಾಜಪ್ರತಿಷ್ಠಾನದ ಮೂಲಕ ವ್ಯವಸ್ಥಿತವಾಗಿ ಮುನ್ನಡೆಸುತ್ತಿದ್ದಾರೆ. ಈ ಪ್ರತಿಷ್ಠಾನವು ಶಿಕ್ಷಣಕ್ಕೆ ಆದ್ಯತೆಯನ್ನಿತ್ತು ಶ್ರೀಮಠದ ಇನ್ನಿತರ ಉದ್ದೇಶಿತ ಕಾರ್ಯಗಳೆಲ್ಲವನ್ನು ಮುನ್ನಡೆಸುವ ಸಲುವಾಗಿ ತೆರೆಯಲಾಗಿರುವ ಒಂದು ಅಂಗಸಂಸ್ಥೆಯಾಗಿದೆ. ಈ ಪ್ರತಿಷ್ಠಾನ ಅನೇಕ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿದೆ. ಶೈಕ್ಷಣಿಕತೆ, ಸಮಾಜಿಕತೆ, ಧಾರ್ಮಿಕತೆ,ಅಲ್ಲದೆ ಪ್ರಸ್ತುತ ಮಠದ ಪ್ರತಿಷ್ಠಾನದ ವತಿಯಿಂದ ನಡೆಸುತ್ತಿರುವ ಧಾರ್ಮಿಕ ಸಾಂಸ್ಕೃತಿಕ, ಸಾಮಾಜಿಕ ಪರವಾದ ಕಾರ್ಯಕ್ರಮಗಳನ್ನು ದಾಖಲಿಸುವ ಪ್ರಯತ್ನವನ್ನು ಇಲ್ಲಿ ಮಾಡಬೇಕಾಗಿದೆ. ಇಲ್ಲಿ ನಡೆದು ಬಂದಿರುವ ಸಂಪ್ರದಾಯ ಜನರ ಅಭಿಪ್ರಾಯದ ಮೇರೆಗೆ ನಾಲ್ಕು ಶತಮಾನದಷ್ಟು ಹಳೆಯದಾದ ಈ ಮಠದ ಪೀಠವನ್ನು ಅಲಂಕರಿಸಿರುವವರೆಲ್ಲರು ಮಹನ್ ತಪಸ್ವಿಗಳೂ, ಶ್ರೇಷ್ಠತತ್ವಜ್ಞಾನಿಗಳೂ, ಧರ್ಮಪರಾಯಣರೂ, ಘನವಿದ್ವಾಂಸರು, ಸಮಷ್ಟಿಹಿತಚಿಂತಕರಾದವರಾಗಿದ್ದರೆಂದು ತಿಳಿದುಬರುತ್ತದೆ. ಬಹಳ ಹಿಂದಿನಿಂದಲೂ ಶ್ರೀಮಠದ ಆಶ್ರಯದಲ್ಲಿ ಧರ್ಮ, ಸಂಸ್ಕೃತಿ, ಸಾಮಾಜಿಕ ಪರವಾದ ಕಾರ್ಯಗಳು ಜರಗುತ್ತಲೆ ಬಂದಿವೆ. ಶ್ರೀಮಠದ ೧೮ನೇ ಪೀಠಾಧಿಪತಿಗಳಾದ ಶ್ರೀ ಬಸವಲಿಂಗಸ್ವಾಮಿಗಳು (೧೮೮೦-೧೯೫೨) ತಮ್ಮ ಹಿಂದಿನ ಗುರುಪರಂಪರೆಯವರ ಹೆಸರು ಅವರ ಕಾರ್ಯ ಸಾಧನೆಗಳೆಲ್ಲವನ್ನು ಕುರಿತು ಸ್ವಹಸ್ತಾಕ್ಷರದಲ್ಲಿ ಬರೆದಿರುವ ಕಾವ್ಯಮಾಲಿಕೆಯಲ್ಲಿ ಶ್ರೀ ಮಠದ ಬಗ್ಗೆ ಹೆಚ್ಚು ವಿಚಾರ ತಿಳಿಯಬಹುದಾಗಿದೆ. ಸಾತ್ವಿಕ ಸ್ವಭಾವದವರು ಶರಣಜನಸಂತಾನರು ಸದ್ಗುಣಸಂಪನ್ನ ಆಚಾರ ನಿಷ್ಟೆಗೆ ಪ್ರಸಿದ್ಧಿಯಾದ ಈ ಗುರುಗಳ ನಡವಳಿಕೆಗಳನ್ನು ಗಮನಿಸಿದ್ದ ಭಕ್ತ ಸಮೂಹ ಇವರನ್ನು 'ಮಡಿಸ್ವಾಮಿ'ಗಳೆಂದೆ ಕರೆಯುತ್ತಿದ್ದರು. ಶ್ರೀಗಳು ಸ್ವತಃ ಕವಿಗಳು, ಸಾಹಿತಿಗಳು, ಚಿಂತಕರು ಆಗಿದ್ದರಿಂದ ಇವರ ಪ್ರತಿಭೆಯನ್ನು ಮೆಚ್ಚಿ, ಮೈಸೂರಿನ ಪ್ರಸಿದ್ಧ ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ತಮ್ಮ ಆಸ್ಥಾನದ ವಿದ್ವಾಂಸರನ್ನಾಗಿ ನೇಮಿಸಿಕೊಂಡಿದ್ದರು. ಶ್ರೀಮಠದಲ್ಲಿ ನಾನಾರೀತಿಯ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಪರವಾದ ಕಾರ್ಯಕ್ರಮಗಳನ್ನು ಜರುಗಿಸಿದ ಖ್ಯಾತಿಗೆ ಒಳಗಾದರು. ಇವರ ನಂತರದ ೧೯ನೇ ಗುರುಗಳಾದ ಪೂಜ್ಯಶ್ರೀ ಗುರುಶಾಂತವೀರ ಸ್ವಾಮಿಗಳೂ ಕೂಡ ಸಂಸ್ಕೃತ ಭಾಷೆಯ ಅಗಾದವಾದ ಪಾಂಡಿತ್ಯ ಪಡೆದು ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದವರಾಗಿದ್ದಾರೆ.

ಶ್ರೀಮಠದಲ್ಲಿ ನಡೆಯುವಂತಹ ಧಾರ್ಮಿಕ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ಜರಗುವಂತೆ ಮಾಡುವಲ್ಲಿ ತುಂಬಾ ಶ್ರಮಿಸಿದವರಾಗಿದ್ದಾರೆ. ಇದಕ್ಕಾಗಿಯೇ ಅವರು ಪ್ರತ್ಯೇಕವಾದ ಸಭಾಭವನ (ಶ್ರೀನಟರಾಜಮಂದಿರ)ವನ್ನು ನಿರ್ಮಿಸಿ ತಮ್ಮ ನಿಕಟಪೂರ್ವ ಗುರುಗಳಾಗಿದ್ದ ಪೂಜ್ಯ ಶ್ರೀಬಸವಲಿಂಗಸ್ವಾಮಿಗಳ ಪುಣ್ಯಾರಾಧನೆಯನ್ನು ಪ್ರತೀ ವರ್ಷ ಮಾರ್ಚ್‌ತಿಂಗಳಲ್ಲಿ ಆಚರಿಸಿ ಅನ್ನಸಂತರ್ಪಣೆ ಮಾಡುವುದನ್ನು ರೂಢಿಸಿದವರಾಗಿರುವುದನ್ನು ನಾವು ಗಮನಿಸಬಹುದು.

ಪ್ರಸ್ತುತ ಶ್ರೀ ಹೊಸಮಠದ ೨೦ನೇ ಪೀಠಾಧಿಪತಿಗಳು ಉತ್ತಮ ಸಂಘಟನಾಕಾರು ಆಗಿರುವ ಶ್ರೀಚಿದಾನಂದ ಸ್ವಾಮಿಗಳು ಪದವೀದರರೂ ಶ್ರೀಮಠದ ಪರಂಪರೆಯ ಎಲ್ಲ ಆಯಾಮಗಳ ಅರಿವುಳ್ಳವರೂ ಆಗಿದ್ದು ತಮ್ಮ ಗುರುಪರಂಪರೆಯ ಹಿಂದಿನಿಂದಲೂ ಆಚರಿಸಿ ರೂಢಿಗೆ ತಂದಿರುವ ಎಲ್ಲಾ ಕಾರ್ಯಕ್ರಮಗಳನ್ನು ತಾವು ಸಂಸ್ಥಾಪಿಸಿರುವ ಶ್ರೀ ನಟರಾಜಪ್ರತಿಷ್ಠಾನದ ಮೂಲಕ ತುಂಬಾ ಅರ್ಥಪೂರ್ಣವಾಗಿ ಮತ್ತು ವ್ಯವಸ್ಥಿತವಾಗಿ ಮುನ್ನಡೆಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಶ್ರೀ ನಟರಾಜ ಪ್ರತಿಷ್ಠಾನದ ಆಶ್ರಯದಲ್ಲಿ ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಲಿಂಗೈಕ್ಯ ಪೂಜ್ಯ ಶ್ರೀಬಸವಲಿಂಗ ಸ್ವಾಮಿಗಳ ಪುಣ್ಯಾರಾಧನಾ ಮಹೋತ್ಸವವನ್ನು ಆಚರಿಸಿ, ಅನ್ನಸಂತರ್ಪಣೆ ನಡೆಸಲಾಗುತ್ತಿದೆ. ಏಪ್ರಿಲ್ ತಿಂಗಳಲ್ಲಿ ಆಚರಿಸಲಾಗುವ ಪೂಜ್ಯ ಶ್ರೀ ಗುರುಶಾಂತಸ್ವಾಮಿಗಳ ಪುಣ್ಯಾರಾಧನಾ ಮಹೋತ್ಸವದ ಸಂದರ್ಭದಲ್ಲಿ ಅವರ ಸ್ಮರಣಾರ್ಥ ಚರ್ಚಾಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಿಗೆ ಬಹುಮಾನಗಳ ನೀಡಿ ಗುರುಪರಂಪರೆಯನ್ನು ತಿಳಿಸುವುದರ ಜೊತೆಗೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ಈಸಮಯದಲ್ಲಿ ಜ್ಞಾನದಾಸೋಹದ ಜೊತೆಗೆ ಅನ್ನದಾಸೋಹ ಏರ್ಪಡಿಸಲಾಗುತ್ತದೆ. ಅಲ್ಲದೆ ಮೇ ತಿಂಗಳಲ್ಲಿ ಶರಣ ಪರಂಪರೆಯ ಶ್ರೇಷ್ಠ ವ್ಯಕ್ತಿಗಳಾದ ಬಸವಣ್ಣ, ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿಯವರ ಜಯಂತೋತ್ಸವಗಳನ್ನು ಅದ್ದೂರಿಯಾಗಿ ಆಚರಿಸುವ ಪರಿಪಾಟವಿದೆ. ಈಮೂರು ದಿನಗಳು ಬೆಳಗೂ ಸಂಜೆ ವಿಶೇಷ ಪೂಜಾ ಕಾರ್ಯಕ್ರಮ. ಭಜನಾ ಕಾರ್ಯಕ್ರಮ ನಡೆಸಲಾಗುತ್ತಿದೆ. ಪ್ರತಿಸಂಜೆ ಮಠಾದಿಪತಿಗಳ ಸಮ್ಮುಖದಲ್ಲಿ ಆಹ್ವಾನಿತ ವಿದ್ವಾಂಸರಿಂದ ವಿಶೇಷ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿ, ಶರಣ ಧರ್ಮದ ಸಂದೇಶವನ್ನು ಇಂದಿನ ಜನಸಾಮಾನ್ಯರಿಗೆ ತಿಳಿಸುವುದರ ಮೂಲಕ ಶರಣತತ್ವ ಚಿಂತನೆಗಳ ಅರಿವು ಮೂಡಿಸುವ ಕಾರ್ಯ ಮಾಡುತ್ತಿದೆ. ಇದೇ ಸಂದರ್ಭದಲ್ಲಿ ಉಚಿತ ಸಾಮೂಹಿಕವಿವಾಹ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ. ಈ ಎಲ್ಲ ಅಧ್ಯಾತ್ಮಿಕ, ಸಾಮಾಜಿಕ, ಪರವಾದ ಕಾರ್ಯಕ್ರಮ ಆಚರಿಸಿದ ನಂತರ ಅಂತಿಮದಲ್ಲಿ ಶ್ರೀಬಸವೇಶ್ವರದ ಭವ್ಯ ಪುತ್ತಳಿಯನ್ನು ನಗರದ ಪ್ರಮುಖ ರಸ್ತೆಗಳಲ್ಲಿ, ಡೊಳ್ಳುಕುಣಿತ, ವೀರಗಾಸೆ,

ನಂದಿಧ್ವಜ, ಕಂಸಾಳೆ ಮತ್ತು ಕರಡಿಮೇಳ ಮುಂತಾದ ಜಾನಪದ ಕಲಾ ತಂಡಗಳೊಡಗೂಡಿ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮಾಡಲಾಗುತ್ತದೆ. ಈ ಕಾರ್ಯಕ್ರಮ ನಡೆಯುವ ಮೂರು ದಿನಗಳು ಭಾಗವಹಿಸುವ ಎಲ್ಲಾ ಭಕ್ತರಿಗೂ ಪ್ರಸಾದದ ವ್ಯವಸ್ಥೆ ಇರುತ್ತದೆ. ಅಕ್ಟೋಬರ್ ಮತ್ತು ನಂಬರ್ ತಿಂಗಳಲ್ಲಿ ಕಾರ್ತಿಕಮಾಸದ ಪ್ರತಿಸೋಮವಾರ ಶ್ರೀಮಠದ ಆವರಣದಲ್ಲಿರುವ ಶ್ರೀಸೋಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಪುನಸ್ಕಾರಗಳನ್ನು ಮಾಡಲಾಗುತ್ತಿದೆ.

ಕಾರ್ತಿಕ ಮಾಸದ ಸಂದರ್ಭದಲ್ಲಿ ಪ್ರತಿಸಂಜೆ ಪ್ರಸಿದ್ಧ ವಿದ್ವಾಂಸರನ್ನು ಆಹ್ವಾನಿಸಿ ಧಾರ್ಮಿಕ ಉಪನ್ಯಾಸಗಳನ್ನು ಏರ್ಪಡಿಸುವುದರ ಮೂಲಕ ಜನ ಸಾಮಾನ್ಯರಲ್ಲಿರುವ ತಮೋಗುಣ ಹೋಗಲಾಡಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ.

ಸಾಮಾಜಿಕವಾಗಿ ಚಿಂತಿಸುವುದಾದರೆ ಇಂದಿನ ದಿನಗಳಲ್ಲಿ ವಯಸ್ಸಾದ ವ್ಯಕ್ತಿಗಳಿಗೆ ಆಶ್ರಯ ದೊರಕುವುದು ತುಂಬಾ ಕಷ್ಟ. ಅಂತಹ ವ್ಯಕ್ತಿಗಳಿಗೆ ವೃದ್ದಾಪ್ಯದಲ್ಲಿ ವಿವಿಧ ಕಾರಣಗಳಿಂದಾಗಿ ಮಕ್ಕಳು ಅಥವಾ ಕುಟುಂಬದ ಇನ್ನಿತರ ಆವಜ್ಞೆಗೆ ತುತ್ತಾಗಿ ಸಂಕಷ್ಟಕ್ಕೊಳಗಾಗುವ ವಯೋವೃದ್ಧರು ತಮ್ಮ ಉಳಿದ ಜೀವಿತಾವಧಿಯನ್ನು ನೆಮ್ಮದಿಯಿಂದ ಕಳೆಯುವಂತಾಗಬೇಕೆಂದು 'ಶ್ರೀ ನಟರಾಜವೃದ್ಧಸೇವಾಶ್ರಮ" ಎಂಬ ಸಂಸ್ಥೆಯನ್ನು ಮೈಸೂರಿನಿಂದ ೧೫ ಕಿಲೋಮೀಟರ್ ದೂರದಲ್ಲಿರುವ ನಾಗವಾಲದ ಗ್ರಾಮದ ಪಕ್ಕದಲ್ಲಿ ಮಠದ ಸದ್ಭಕ್ತರಲೊಬ್ಬರಾದ ಬೆಂಗಳೂರಿನ ಶ್ರೀಮಾನ್ ಚಂದ್ರಶೇಖರಯ್ಯ ಎಂಬುವವರು ಶ್ರೀ ಮಠಕ್ಕೆ ದಾನವಾಗಿ ನೀಡಿರುವ ತೋಟದಲ್ಲಿ ೧೯೯೬ರಲ್ಲಿ ಸ್ಥಾಪಿಸಲಾಗಿದೆ.

ಹೀಗೆ ಶ್ರೀಮಠವು ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಉದ್ದೇಶಿತ ಎಲ್ಲ ಕಾರ್ಯಗಳನ್ನು ಅರ್ಥಪೂರ್ಣವಾಗಿ ಮತ್ತು ವ್ಯವಸ್ಥಿತವಾಗಿ ಮುನ್ನಡೆಸಲು ಪೂಜ್ಯ ಶ್ರೀ ಚಿದಾನಂದ ಸ್ವಾಮಿಗಳು ಸಂಸ್ಥಾಪಿಸಿರುವ ಶ್ರೀ ನಟರಾಜ ಪ್ರತಿಷ್ಠಾನದ ಆಶ್ರಯದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳು ವರ್ಷಪೂರ್ತಿ ನಿರಂತರವಾಗಿ ಜರಗುತ್ತಲೆ ಇರುತ್ತವೆ.

**ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನಮಠದ ಧಾರ್ಮಿಕ ಮತ್ತು ಸಾಮಾಜಿಕ ಕೊಡುಗೆ :**

ಈ ದಾಸೋಹಮಠ ಜನತೆಯಲ್ಲಿ ಶರಣಧರ್ಮದ ತತ್ವಗಳನ್ನು ಬಿತ್ತರಿಸುತ್ತಾ ಕಾಯಕ ಮತ್ತು ದಾಸೋಹವೆಂಬ ನಿಜತತ್ವಗಳನ್ನು ಅನುಸರಿಸುತ್ತ ಬಂದಿದೆ. ಕೆರೆಯನೀರನ್ನು ಕೆರೆಗೆಚೆಲ್ಲಿ ಎಂಬಂತೆ ಭಕ್ತಾದಿಗಳಿಂದ ಬಂದ ಸಂಪತ್ತನೆಲ್ಲ ಸನಾತನ ಧರ್ಮದ ಜಾಗೃತಿಗಾಗಿ ಸಾಮಾಜಿಕವಾಗಿ ಸುಸಂಸ್ಕೃತ ಸಮಾಜ ಕಟ್ಟಿ ಆ ಮೂಲಕ ವೈಚಾರಿಕತೆಯನ್ನು ಬೆಳಸುತ್ತಿದೆ. ಶ್ರೀಮಠದವು ಸದಾಕಾಲ

ವಿಚಾರಗೋಷ್ಠಿಗಳು,ಪುರಾಣಪ್ರವಚನಗಳು,ಶಿವಾನುಭವಉಪನ್ಯಾಸಗಳುಮತ್ತುಧಾರ್ಮಿಕಉತ್ಸವಗಳನ್ನು ನಡೆಸಿಕೊಂಡು ಬರುತ್ತಿದೆ. ಇಲ್ಲಿ ನಿತ್ಯಪೂಜೆ ದಾಸೋಹ ನಿರಂತರವಾಗಿ ನಡೆಯುತ್ತಿದೆ. ಶ್ರೀಗುರುಮಲ್ಲೇಶ್ವರರ ಮೂಲಗದ್ದುಗೆಯನ್ನೊಳಗೊಂಡಂತೆ ಶ್ರೀಮಠದ ಪರಂಪರೆಯಲ್ಲಿ ಬಂದಂತಹ ಮತ್ತು ಮಠಕ್ಕಾಗಿ ಅವಿಶ್ರಾಂತವಾಗಿ ದುಡಿದ ಎಲ್ಲಾ ಪೂಜ್ಯರುಗಳ ಗದ್ದುಗೆಗಳಿಗೂ ಪೂಜೆ ನಡೆಯುತ್ತಿದೆ. ತ್ರಿವಿಧ ದಾಸೋಹಗಳಾದ ಅನ್ನ, ಅಕ್ಷರ, ಜ್ಞಾನ ದಾಸೋಹಗಳು ನಿರಂತರವಾಗಿ ಅದರಲ್ಲೂ ಅನ್ನದಾಸೋಹ ಶ್ರೀಮಠದ ಜೀವನಾಡಿಯಾಗಿದೆ. ಕಂತೆಭಿಕ್ಷದಿಂದ ಬಂದ ಮತ್ತು ಮಠದ ವತಿಯಿಂದ ಮಾಡಿದ ಪ್ರಸಾದವನ್ನು ನೂರಾರು ಭಕ್ತರಿಗೆ ಪ್ರತಿನಿತ್ಯ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ವೇಳೆಗಳಲ್ಲಿ ದಾಸೋಹ ಏರ್ಪಡಿಸಲಾಗುತ್ತಿದೆ.

ಶ್ರೀ ಗುರುಮಲ್ಲೇಶ್ವರರ ತತ್ವಾಚರಣೆಗಾಗಿ ಸ್ಥಾಪಿತವಾದ ಶಾಖಾಮಠಗಳು ಇನ್ನೂರೈವತ್ತಕ್ಕೂ ಹೆಚ್ಚಿವೆ. ಈ ಮಠಗಳು ಎಲೆಮರೆಯ ಕಾಯಿಯಂತೆ ಕಾಯಕ ಸೇವೆ ಮಾಡುತ್ತಿವೆ. ಎಲ್ಲಾ ಶಾಖಾಮಠಗಳಲ್ಲೂ ಕಂತೆಭಿಕ್ಷೆ ಕಾಯಕ ಕಡ್ಡಾಯವಾಗಿ ನಿರಂತರ ನಡೆಯುತ್ತಿದೆ. ಈ ಕಂತೆಭಿಕ್ಷದ ಕಾಯಕವನ್ನು ಜಾರಿಗೆ ತಂದ ಕೀರ್ತಿ ಇದರ ನಿರ್ಮಾತೃ ಶ್ರೀಗುರುಮಲ್ಲೇಶ್ವರರು, ಕಾಯಕ ಯಾವುದಾದರೂ ಸರಿ ಅದು ಸತ್ಯಶುದ್ಧವಾಗಿರಬೇಕು. ಭಕ್ತರ ಮನೆಗಳಿಗೆ ಹೋಗಿ ಭಿಕ್ಷೆ ಮಾಡಿ ತಂದು ಅದನ್ನು ಪ್ರಸಾದದ ರೂಪದಲ್ಲಿ ವಿತರಣೆ ಮಾಡಿದರೆ ಅದು ಗುರು-ಲಿಂಗ-ಜಂಗಮ ಭಕ್ತರಿಗೆ ಅರ್ಪಿತವಾಗುತ್ತದೆ. ಈಗಿನ ಮಠದ ಅಧ್ಯಕ್ಷರಾದ ಶ್ರೀ.ನಿ.ಪ್ರ.ಸ್ವ. ಮಹಂತಸ್ವಾಮಿಗಳವರು ಸಹ ಹಿಂದಿನವರಂತೆ ಕಾಯಕ-ದಾಸೋಹ ಕಾರ್ಯವನ್ನು ಎಡಬಿಡದೆ ನಡೆಸಿಕೊಂಡು ಶ್ರೀಮಠದ ಅಭಿವೃದ್ಧಿಗಾಗಿ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ. ಶ್ರೀಗಳು ಮಿತಭಾಷೆ, ಸರಳಸಜ್ಜನರು ಹಳ್ಳಿ ಹಳ್ಳಿಗಳಿಗೆ ಪಾದಬೆಳಸಿ ಧರ್ಮಪ್ರಚಾರ ಮಾಡುವುದರ ಮೂಲಕ ಜನರಿಗೆ ತತ್ವಭೋದನೆ ಮಾಡಿ ಅವರ ನಡೆನುಡಿಗಳನ್ನು ಬದಲಾಯಿಸಿ ಪರಸ್ಪರ ಒಬ್ಬೊರನೊಬ್ಬರು ಪ್ರೀತಿಸುವ ಮೂಲಕ ಕಾಯಕ-ದಾಸೋಹ ಮನೋಭಾವನೆ ಬೆಳೆಸುವ ಕಾಯದಲ್ಲಿ ನಿರತರಾಗಿದ್ದಾರೆ. ಜೊತೆಗೆ ಭೇಟಿಕೊಟ್ಟ ಎಲ್ಲಡೆ ವೀರಶೈವ ಧರ್ಮದ ಮೂಲ ಸೂತ್ರಗಳಾದ **ಅಷ್ಟಾವರಣ**ಗಳು ಗುರು-ಲಿಂಗ-ಜಂಗಮ, ವಿಭೂತಿ, ರುದ್ರಾಕ್ಷಿ ಮಂತ್ರ, ಪಾದೋದಕ, ಪ್ರಸಾದ, **ಪಂಚಾಚಾರ**ಗಳಾದ – ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ, **ಷಟ್ಸ್ಥಲ**ಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಕಾಯಕ ದಾಸೋಹ ಈ ಎಲ್ಲಾ ವಿಚಾರಗಳು ಮತ್ತು ಇವುಗಳ ಆಚರಣೆಯನ್ನು ಪ್ರಚಾರ ಮಾಡುತ್ತಿದ್ದಾರೆ.

ಶ್ರೀ ಗುರುಮಲ್ಲೇಶ್ವರರು ಬಹಳ ಹಿಂದಿನಿಂದಲೂ ಜಂಗಮ ಪಾದಪೂಜೆ ಮತ್ತು ಜಂಗಮೋತ್ಸವಗಳು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಗುರುಮಲ್ಲೇಶ್ವರರಾದಿಯಾಗಿ ಮಠದಗುರು ಪರಂಪರೆಯರೆಯವರಿಗೆಲ್ಲಾ ಜಂಗಮ ಎಂದರೆ ಪ್ರಾಣ. ಪ್ರತಿವರ್ಷ ದೇವನೂರು ಮಠದಲ್ಲಿ ನಡೆಯುವ ಆರಾಧನೆಗಳಲ್ಲಿ ಸಕಲ ಮರ್ಯಾದೆಗಳೊಡನೆ ಜಂಗಮೋತ್ಸವ ಮತ್ತು ಪಾದಪೂಜೆಗಳು ನಿರಂತರವಾಗಿ ನಡೆದುಕೊಂಡು ಬಂದಿದೆ. ಇದಕ್ಕೆ ಇಂತಹವರೆ ಆಗಬೇಕೆಂದೇನು ಇಲ್ಲ. ಮಠಕ್ಕೆ ಬರುವ ಜಂಗಮರ ಸ್ಥಾನಮಾನಗಳನ್ನು ಲೆಕ್ಕಿಸದೆ ಎಲ್ಲರಿಗೂ ಸಮಾನ ಗೌರವಾದರಗಳನ್ನು ನೀಡಿ ಸತ್ಕರಿಸಲಾಗುತ್ತದೆ. ಇಲ್ಲಿ ನಿತ್ಯ ಶ್ರೀಗುರುಮಲ್ಲೇಶ್ವರ ಭಜನ ಮೇಳ ವಿಶಿಷ್ಟ ಪ್ರಸಿದ್ಧಿ ಪಡೆದಿದೆ. ದೇವರ ಸಾಕ್ಷಾತ್ಕಾರಕ್ಕೆ ಭಜನೆ ಒಂದು ಸುಲಭ ಮಾರ್ಗ. ಭಜನೆಯನ್ನು ನೋಡಲೇ ಬೇಕಾದರೆ ಪ್ರತಿವರ್ಷ ಶ್ರೀಮಠದಲ್ಲಿ ನಡೆಯುವ ಜೇಷ್ಟಮಾಸದ ಕೊನೆಯವಾರ ಮತ್ತು ಕೊನೆಯ ಕಾರ್ತಿಕೋತ್ಸವ ಶಿವರಾತ್ರಿ ಮತ್ತು ಹಬ್ಬ ಹರಿದಿನಗಳಲ್ಲಿ ಭಾಗಿಯಾಗಬೇಕು. ಭಜನಾ ತಂಡದವರು ಶರಣ ಬಸವಣ್ಣನವರು, ಗುರುಮಲ್ಲೇಶ್ವರರು ಮತ್ತು ಶರಣರ ನಾಮಸ್ಮರಣೆ ಮಾಡುತ್ತಾ ಭಾವಪರವಶವಾಗಿ ತಮ್ಮನ್ನು ತಾವೇ ಮೈಮರೆಯುತ್ತಾರೆ. ಹಾರ್ಮೋನಿಯಂ, ತಬಲ, ಕಂಜರಿ, ತಾಳ ಮುಂತಾದ ಪಕ್ಕವಾದ್ಯಗಳಲ್ಲಿ ಭಜನೆ ಮಾಡುವುದು ನೆರೆದ ಭಕ್ತರು ಭಾವಪರವಶರಾಗಿ ಶ್ರೀಗುರುಮಲ್ಲೇಶ್ವರರಲ್ಲಿ ತಲ್ಲೀನರಾಗುವುದು. ಭಜನೆಯ ಅಂತ್ಯದಲ್ಲಿ ಉದ್ಘೋಶಿಸುವ ಜೈ ನಮಃ ಪಾರ್ವತೀ ಪತೇ ಹರಹರ ಮಹದೇವ್ ಅಲಕ್ ನಿರಂಜನ ಭೀಕ್ಷೆಶಮಹಾಸ್ವಾಮಿ ಬಹುಪರಾಕ್ – ಶಿವನಒಡ್ಡೋಲಗದ ಒಂದು ಸುಂದರ ಕಲ್ಪನೆಯನ್ನು ತರುತ್ತದೆ. ಹೀಗೆ ಧಾಮಿಕವಾಗಿ ಈ ಮಠದಲ್ಲಿ ನಾನಾ ವಿಧಿವಿಧಾನಗಳು ಭಕ್ತಿ ಶ್ರದ್ಧೆಯಿಂದ ನಿರಂತರವಾಗಿ ನಡೆಯುತ್ತವೆ.

**ಮಠದಲ್ಲಿ ನಡೆದಿರುವ ಪ್ರಮುಖ ಆರಾಧನಾ ಮಹೋತ್ಸವಗಳು**

ಮಹಾತ್ಮ ಗುರುಮಲ್ಲೇಶ್ವರರೊಡನೆ ಮೈಸೂರಿನಿಂದ ದೇವನೂರಿಗೆ ಆಗಮಿಸಿದ್ದ ವಯೋವೃದ್ಧರೂ, ಜ್ಞಾನವೃದ್ಧರೂ ಆಗಿದ್ದ ಪೂಜ್ಯ ಶ್ರೀ ಮುಪ್ಪಿನಸ್ವಾಮಿಗಳವರು ದೇವನೂರಿನಲ್ಲಿ ಲಿಂಗೈಕ್ಯರಾದಾಗ, (ಲಿಂಗೈಕ್ಯರಾದ ಕಾಲ ನಿಖರವಾಗಿ ಗೊತ್ತಾಗಿಲ್ಲ) ಅವರ ಲಿಂಗಮಯ ಶರೀರವನ್ನು ದೇವನೂರಿನ ಹಳೇಮಠದಿಂದ ಊರಿನ ಪಶ್ಚಿಮ ಭಾಗದಲ್ಲಿ (ಈಗ ಮಠವಿರುವ' ಸ್ಥಳದಲ್ಲಿ) ಸಾಂಪ್ರದಾಯಿಕವಾಗಿ ನಿಕ್ಷೇಪಿಸಿ, ಕ್ರಿಯಾ ಸಮಾಧಿಗೈದು ಗದ್ದುಗೆ ಮಾಡಲಾಯಿತು. ನಂತರ ಗುರುಮಲ್ಲೇಶ್ವರರ ನೇತೃತ್ವದಲ್ಲಿ ೧೨ನೇ ದಿನದಂದು ಅವರ ಪ್ರಮಥ ಗಣಾರಾಧನೆಯನ್ನು ವೈಭವಪೂರ್ಣವಾಗಿ ಮಾಡಿ ಧಾರ್ಮಿಕ ಗೋಷ್ಠಿ, ಜಂಗಮೋತ್ಸವ ಮತ್ತು ಸಹಸ್ರಾರು ಮಂದಿಗೆ ಮಹಾದಾಸೋಹ ಕಾರ್ಯಕ್ರಮಗಳನ್ನು ನಡೆಸಲಾಯಿತು.

ದಿನಾಂಕ ೨೫-೦೬-೧೮೯೯ ರಂದು ಮಹಾತ್ಮ ಶ್ರೀ ಗುರುಮಲ್ಲೇಶ್ವರರು ಬಯಲಲ್ಲಿ ಬಯಲಾದಾಗ ಅವರ ಲಿಂಗಮಯಶರೀರವನ್ನು ಸಾಂಪ್ರದಾಯಿಕವಾಗಿ ನಿಕ್ಷೇಪಿಸಿ ಮುಪ್ಪಿನಸ್ವಾಮಿಗಳವರ ಗದ್ದುಗೆಯ ಪಕ್ಕದಲ್ಲಿ ಕ್ರಿಯಾಸಮಾದಿಮಾಡಿ ಗದ್ದುಗೆ ನಿರ್ಮಿಸಲಾಯಿತು. ನಂತರ ೧೧ ಮತ್ತು ೧೨ ನೇ ದಿನಗಳಿಂದ ಶ್ರೀ ಗುರುಮಲ್ಲೇಶ್ವರ ಪ್ರಥಮ ಗಣಾರಾಧನ ಮಹೋತ್ಸವವನ್ನು ಪೂಜ್ಯರಾದ ಶ್ರೀ ಭಿಕ್ಷದರಾಚಪ್ಪಮಹಾಸ್ವಾಮಿಗಳವರು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಈ ದಿವ್ಯಸಮಾರಂಭಕ್ಕೆ ಅನೇಕ ಪೂಜ್ಯರುಗಳನ್ನು ಮಠಾಧಿಪತಿಗಳನ್ನು ಆಹ್ವಾನಿಸಲಾಗಿತ್ತು. ಶಿವಾನುಭವಗೋಷ್ಠಿ, ಭಜನಾಮೇಳ, ಜಂಗಮೋತ್ಸವ ಮೊದಲಾದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಬಂದಂತಹ ಭಕ್ತ ಸಮೂಹಕ್ಕೆ ಮಹಾದಾಸೋಹ ವ್ಯವಸ್ಥೆ ಮಾಡಲಾಯಿತು.

ಮಹಾತ್ಮರಾದ ಶ್ರೀ ಗುರುಮಲ್ಲೇಶ್ವರರು ಲಿಂಗೈಕ್ಯರಾದ ನಂತರ ಕ್ರಿ.ಶ. ೧೮೯೯ ರಂದು ಪ್ರಾರಂಭವಾದ ಶ್ರೀ ಗುರುಮಲ್ಲೇಶ್ವರರ ಪ್ರಮಥ ಗಣಾರಾಧನ ಮಹೋತ್ಸವವು ಪ್ರತಿವರ್ಷ ಜೇಷ್ಠಮಾಸದಲ್ಲಿ ನಡೆಯುತ್ತಿದೆ. (ಕ್ರಿ.ಶ. ೧೯೯೯) ಸತತವಾಗಿ ಒಂದು ನೂರು ವರ್ಷಗಳವರೆಗೆ ನಡೆದುಕೊಂಡು ಬಂದಿರುವ ಈ ಗಣಾರಾಧನ ಮಹೋತ್ಸವದಲ್ಲಿ ಸಹಸ್ರಾರು ಭಕ್ತರು ಭಾಗವಹಿಸಿ ಪುನೀತರಾಗಿದ್ದಾರೆ. ಇಪ್ಪತ್ತನೇ ಶತಮಾನದ ಕೊನೆಯ ವರ್ಷದಲ್ಲಿ ಶ್ರೀ ಗುರುಮಲ್ಲೇಶ್ವರರ ಈ ಗಣಾರಾಧನ ಶತಮಾನೋತ್ಸವದಲ್ಲಿ ಈ ಉತ್ಸವ ನೆನಪಿನಲ್ಲಿ ಉಳಿವಂತೆ ಮಾಡಲು ಶ್ರೀ ಗುರುಮಲ್ಲೇಶ್ವರ ಶತಮಾನೋತ್ಸವ ಸಂಸ್ಮರಣ ಗ್ರಂಥ ಸಂಪಾದನೆ, ಕೆಲವು ಪುಸ್ತಕಗಳ ಪ್ರಕಟಣೆ, ಗೋಶಾಲೆ, ಅಡುಗೆಮನೆ, ದಾಸೋಹಭವನಗಳ ನಿರ್ಮಾಣ, ಮಠದ ನವೀಕರಣ ಮೊದಲಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇವುಗಳ ಜೊತೆಗೆ, ಶರಣಧರ್ಮದ ವಿಚಾರಗೋಷ್ಠಿಗಳು, ಭಜನಾಮೇಳ, ನಾಟಕ ಪ್ರದರ್ಶನ, ಜಂಗಮೋತ್ಸವ, ಮಹಾದಾಸೋಹ ಮೊದಲಾದ ಕಾರ್ಯಕ್ರಮಗಳ ವ್ಯವಸ್ಥೆಯನ್ನು ಮಾಡಲಾಗಿತ್ತು. ಶ್ರೀಮಠದಲ್ಲಿದ್ದು ಶ್ರೀಮಠದ ಕಾಯಕ ದಾಸೋಹತತ್ವಗಳಲ್ಲಿ ನಿರಂತರವಾಗಿ ತೊಡಗಿ ತಮ್ಮ ಇಡೀ ಜೀವನವನ್ನು ಮಠದ ಏಳ್ಗೆಗಾಗಿ ಸವೆಸಿದ ಪೂಜ್ಯರಗಳಾದ ಶ್ರೀ ಚನ್ನಬಸವ ಸ್ವಾಮಿಗಳು ಶ್ರೀವಿರಕ್ತಸ್ವಾಮಿಗಳು, ಶ್ರೀ ಶರಣಬಸಪ್ಪ ತಾತಾರವರು, ಶ್ರೀಮೌನಿಸ್ವಾಮಿಗಳು, ಶ್ರೀಶೈಲದಶಿವಾನಂದ ಸ್ವಾಮಿಗಳವರುಗಳು ಲಿಂಗೈಕ್ಯರಾದ ಬಳಿಕ (ಇವರು ಲಿಂಗೈಕ್ಯರಾದ ಶಿವಾನಂದ ನಿಖರವಾಗಿ ಲಭ್ಯವಿಲ್ಲ.) ಹಿಂದಿನ ಸ್ವಾಮಿಗಳಂತೆ ಸಾಂಪ್ರದಾಯಕ ಶೈಲಿಯಲ್ಲಿ ಕ್ರಿಯಾಸಮಾಧಿ ಮಾಡಿ ಮಠದಲ್ಲೆ ಗದ್ದುಗೆ ನಿರ್ಮಿಸಲಾಗಿದೆ. ಆಯಾ ಕಾಲಘಟ್ಟದಲ್ಲಿ ಇವರುಗಳ ಗಣಾರಾಧನೆಯನ್ನು ವ್ಯವಸ್ಥೆ ಮಾಡಿ ಈ ಕರ್ತೃ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುವಂತೆಮಾಡಿ ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ ಜಂಗಮ ಗೋಷ್ಠಿ ಮಹಾಪ್ರಸಾದದ

ವ್ಯವಸ್ಥೆಯನ್ನು ತುಂಬಾ ಅಚ್ಚು ಕಟ್ಟಾಗಿ ಇಂದಿಗೂ ಮುನ್ನಡೆಸುತ್ತ ಬಂದಿರುವುದನ್ನು ನಾವು ಗಮನಿಸಬಹುದು.

ಪೂಜ್ಯ ಶ್ರೀಭಿಕ್ಷದಾರ್ಯರ ಕಾಲದಲ್ಲಿ ದಿನಾಂಕ ೧೯-೩-೧೯೧೯ರಲ್ಲಿ ಶ್ರೀಮಠದಲ್ಲಿ ಗುರುಮಲ್ಲೇಶ್ವರರ ಗದ್ದುಗೆಯ ಗೋಪುರಕ್ಕೆ ಸುವರ್ಣ ಕಳಶಾರೋಹಣ ಕಾರ್ಯಕ್ರಮ ನಡೆಸಲಾಯಿತು. ಇದು ಶ್ರೀಮಠದ ಇತಿಹಾಸದಲ್ಲಿ ಮರೆಯಲಾಗದ ಪ್ರಮುಖ ದಿನ. ಅನೇಕ ಮಠಾಧಿಪತಿಗಳು ಹಾಗೂ ಭಕ್ತರನ್ನು ಸಂಘಟಿಸಿ ಇಂತಹ ಒಂದು ಪವಿತ್ರ ಕಾರ್ಯವನು ಶ್ರೀ ಭಿಕ್ಷದಸ್ವಾಮಿಗಳು ದಕ್ಷತೆಯಿಂದ ನಿರ್ವಹಿಸಿದರು. ಕೆಲವು ಕುಹಕಿಗಳು ಬಂದಿರುವ ಜನಕ್ಕೆ ಈ ಭಿಕ್ಷದಯ್ಯ ಅನ್ನಹಾಕಿ ಪೂರೈಸುತ್ತಾನೆಯೋ? ಎಂದು ಆಡಿಕೊಳ್ಳುತ್ತಿದ್ದರಂತೆ ಅಂತಹವರು ಬಾಯಿ ಮುಚ್ಚಿಕೊಳ್ಳುವಂತೆ ಅನ್ನದ ರಾಶಿಯನ್ನು ಅಕ್ಷಯ ಮಾಡಿದರು ಈ ಭಿಕ್ಷದ ಸ್ವಾಮಿಗಳು. ಎನ್ನುವ ಮಾತು ಈಗಲೂ ಜನರ ಬಾಯಲ್ಲಿದೆ.

ದಿನಾಂಕ ೧೮-೦೪-೧೯೩೨ರಲ್ಲಿ ಶ್ರೀ ಗುರುಮಲ್ಲೇಶ್ವರರ ಕರಕಮಲ ಸಂಜಾತರಾದ ಶ್ರೀ ಭಿಕ್ಷದಾರ್ಯರು ಲಿಂಗೈಕ್ಯರಾದನಂತರ ಶ್ರೀಮಠದಲ್ಲೆ ಇವರ ಗದ್ದುಗೆಯನ್ನು ನಿರ್ಮಿಸಿ ಗಣಾರಾಧನೆ ಶಿವಾನುಭವ ಜಂಗಮಗೋಷ್ಠಿ ಏರ್ಪಡಿಸಿರುವುದನ್ನು ಗಮನಿಸಬಹುದು. ನಂತರ ದಿನಾಂಕ ೧೪-೧೨-೧೯೪೯ರಲ್ಲಿ ಶ್ರೀ ಗುರು ಭಿಕ್ಷದಾರ್ಯರ ಕರಸಂಜಾತರು ಶ್ರೀಮಠದ ಕಟ್ಟಡದ ಸರ್ವಾಂಗೀಣ ಅಭಿವೃದ್ಧಿಯ ರೂವಾರಿಗಳೂ, ಸರಳರೂ, ನಿಸ್ವಾರ್ಥಿಗಳು, ಅಧಿಕಾರಕ್ಕಾಗಿ ಯಾವ ಕ್ಷಣದಲ್ಲಿ ಪರಿತಪಿಸಿದರಲ್ಲದ ಅಭಿನವ ಸಿದ್ಧರಾಮೇಶ್ವರರಂತಿದ್ದ ಪೂಜ್ಯಶ್ರೀಶಿವಪ್ಪಸ್ವಾಮಿಗಳವರು ಲಿಂಗೈಕ್ಯರಾದಾಗ ಶ್ರೀಗಳವರ ಪಾರ್ಥಿವಶರೀರವನ್ನು ಸಹ ಶ್ರೀ ಮಠದಲ್ಲಿ ಸಾಂಪ್ರದಾಯಿಕವಾಗಿ ನಿಕ್ಷೇಪಿಸಿ ಗದ್ದುಗೆನಿರ್ಮಿಸಿ ಯಥಾ ಪ್ರಕಾರ ಕ್ರಿಯಾವಿಧಿಕಾರ್ಯಕ್ರಮಗಳ ಜೊತೆಗೆ ಶರಣಬಂಧುಗಳ ಗೋಷ್ಠಿ, ಮಹಾಪ್ರಸಾದದ ವ್ಯವಸ್ಥೆ ಕಲ್ಪಿಸಿದರು. ಇದೆಲ್ಲದರ ಜೊತೆಗೆ ದೇವನೂರಿನ ಮಠದ ಇತಿಹಾಸದಲ್ಲೆ ನೆನಪಿಡಬಹುದಾದ ಬರೆದಿಡಬಹುದಾದ ಸುವರ್ಣದಿನ ಎಂದರೆ ದಿನಾಂಕ ೧೪-೧೬-೧೯೪೯ರಲ್ಲಿ ಮಠದ ಜೇಷ್ಠಮಾಸದ ಆರಾಧನ ಮಹೋತ್ಸವವು ಪೂಜ್ಯಶ್ರೀ ತೋಂಟದಾರ್ಯರ ನೇತೃತ್ವದಲ್ಲಿ ನಡೆಯಿತು. ಅದೇನೆಂದರೆ ಶ್ರೀಗುರುಮಲ್ಲೇಶ್ವರರ ಸುವರ್ಣಮಹೋತ್ಸವ ಹಾಗೂ ಅರವತ್ಮೂರು ಪುರಾತನರ ಪೂಜಾ ಸಮಾರಂಭಗಳು. ಇದೊಂದು ಅಭೂತಪೂರ್ವವಾದ ಕಾರ್ಯಕ್ರಮವೆಂದು ಇದನ್ನು ಕಣ್ಣಾರೆ ಕಂಡಿರುವ ಜನರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಅರವತ್ಮೂರು ವಿವಿಧ ಮಠಾಧಿಪತಿಗಳನ್ನು ಆಹ್ವಾನಿಸಿ ಅರವತ್ಮೂರು ಮಂಟಪಗಳನ್ನು ಮಾಡಿ ಅರವತ್ಮೂರು ಪುರಾತನ ಹೆಸರುಗಳನ್ನು ಆ ಮಂಟಪಗಳಲ್ಲಿಟ್ಟು ಒಂದೊಂದು ಮಂಟಪದಲ್ಲಿ

ಒಬ್ಬೊಬ ಶ್ರೀಗಳವರ ಪಾದಪೂಜೆಯನ್ನು ಒಂದೊಂದು ದಂಪತಿಗಳಿಗೆ ವಹಿಸಿಕೊಡಲಾಗಿತ್ತು. ಈ ದೃಶ್ಯವನ್ನು ನೋಡಿದಂತ ಶರಣ ಭಕ್ತ ಜನರು ಇದೊಂದು ಶಿವನ ಒಡ್ಡೋಲಗವೆಂದೇ ಭಾವಿಸಿದ್ದರಂತೆ. ನಂತರ ಜಂಗಮೋತ್ಸವ, ಶಿವಾನುಭವಗೋಷ್ಠಿ, ಮಹಾಪ್ರಸಾದ ವಿನಿಯೋಗ ಹೀಗೆ ಅನೇಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಲಕ್ಷಾಂತರ ಜನ ಭಕ್ತರು ಈವೊಂದು ಪುಣ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಧನ್ಯರಾಗಿದ್ದಾರೆ.

ದಿನಾಂಕ ೧೭-೨-೧೯೫೭ ಶ್ರೀಮಠದ ಅಧಿಪತಿಗಳಾಗಿದ್ದ ಶ್ರೀತೊಂಟಾದಾರ್ಯಸ್ವಾಮಿಗಳು ಲಿಂಗೈಕ್ಯರಾಧ ನಂತರ ೦೨-೦೪-೧೯೭೦ ಲಿಂಗೈಕ್ಯ ಶ್ರೀ ಶಿವಪ್ಪಸ್ವಾಮಿಗಳವರ ಕರಸಂಜಾತರೂ ಸಾಹಿತಿಗಳು ಆಗಿದ್ದ ಪೂಜ್ಯಶ್ರೀ ಬಸವಣ್ಣಸ್ವಾಮಿಗಳು ಬಯಲಾದರು. ಇವರ ಲಿಂಗಮಯ ಶರೀರವನ್ನು ಈ ಹಿಂದಿನ ಎಲ್ಲಾ ಪೂಜ್ಯ ಶ್ರೀಗಳಂತೆ ಶ್ರೀಮಠದಲ್ಲಿ ನಿಕ್ಷೇಪಿಸಿ ಗದ್ದುಗೆ ಮಾಡಲಾಯಿತು. ನಂತರ ಇವರ ಗಣಾರಾಧನೆಯನ್ನು ತುಂಬ ಶ್ರದ್ಧಾ ಭಕ್ತಿಯಿಂದ ಸಹಸ್ರಾರು ಭಕ್ತ ಸಮೂಹ ನಿಂತು ನೆರವೇರಿಸಿದರು.

ದಿನಾಂಕ ೧೯-೦೩-೧೯೭೩ರಲ್ಲಿ ಶ್ರೀಮಠದ ಇತಿಹಾಸದ ಮತ್ತೊಂದು ಮೈಲಿಗಳಲ್ಲಿ ಎನ್ನಬಹುದು. ಈಸುದಿನ ಶ್ರೀಗುರುಮಲ್ಲೇಶ್ವರರ 'ವಜ್ರಮಹೋತ್ಸವ ಹಾಗೂ ಶ್ರೀ ಗುರುಭಿಕ್ಷಾದಾರ್ಯರು ಮತ್ತು ಶ್ರೀಗುರು ತೋಂಟದಾರ್ಯರ ಗದ್ದುಗೆಗಳಿಗೆ ನೂತನ ಗೋಪುರಗಳಿಗೆ ಸುವರ್ಣ ಕಲಶಾರೋಹಣ ಕಾರ್ಯಕ್ರಮ ನಡೆದ ದಿನ. ಈ ಕಾರ್ಯಕ್ರಮದಲ್ಲಿ ಕನ್ನಡ ನಾಡಿನ ಪ್ರಸಿದ್ಧ ಮಠಗಳಾದ ಸಿದ್ದಗಂಗಾಮಠದ ಶ್ರೀಗಳಾದ ಡಾ. ಶಿವಕುಮಾರಸ್ವಾಮಿಗಳು, ಸುತ್ತೂರುಮಠದ ಜಗದ್ಗುರುಗಳಾದ ಶ್ರೀಶಿವರಾತ್ರಿರಾಜೇಂದ್ರಮಹಾಸ್ವಾಮಿಗಳು, ಡಂಬಳದ ಜಗದ್ಗುರುಗಳಾದ ಶ್ರೀ ತೊಂಟದಾರ್ಯ ಸಿದ್ಧಲಿಂಗಸ್ವಾಮಿಗಳವರು ಹೀಗೆ ಅನೇಕ ಮಠಾಧಿಪತಿಗಳು ಭಾಗವಹಿಸಿ ಶ್ರೀಮಠದ ತತ್ವದರ್ಶನಗಳನ್ನು ಶ್ರೀಗುರುಮಲ್ಲೇಶ್ವರರ ಮಹಿಮೆಯನ್ನು ಹಾಡಿ ಹೋಗಳಿದರು. ನಂತರ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ ಬೆಳ್ಳಿಪಲ್ಲಕ್ಕಿ ಮಹೋತ್ಸವನ್ನು ಏರ್ಪಡಿಸಲಾಗಿತ್ತು. ಲಕ್ಷಾಂತರ ಜನ ಶರಣ ಭಕ್ತರು ಭಾಗವಹಿಸಿದ ಈ ಸಮಾರಂಭದಲ್ಲಿ, ನಂದಿಕಂಭಗಳು, ವೀರಗಾಸೆ ಕುಣಿತ, ಕರಡಿ ಮೇಳ ಭೃಂಗಿಕುಣಿತ, ಭಜನೆ ಸಂಕೀರ್ತನೆಗಳ ತಂಡಗಳು ಮುಂತಾದ ನಾನಾ ಕಲಾತಂಡಗಳು ಭಾಗವಹಿಸುವುದರ ಮೂಲಕ ಮೆರವಣಿಗೆಯನ್ನು ಅದ್ದೂರಿಯಾಗಿ ನಡೆಸಲಾಯಿತು. ಆನಂತರ ಶಿವಾನುಭವಗೋಷ್ಠಿ ಏರ್ಪಿಡಿಸಲಾಗಿತ್ತು. ಇಲ್ಲಿ ನೆರೆದಿದ್ದ ಲಕ್ಷಾಂತರ ಜನ ಭಕ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀಗುರುವಿನ ಕೃಪೆಗೆ ಪಾತ್ರರಾಗಿದ್ದರು. ಈ ಕಾರ್ಯಕ್ರಮಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದ ಇಂದಿನ

ಮಠದ ಅಧ್ಯಕ್ಷರಾಗಿರುವ ಶ್ರೀ.ನಿ.ಪ್ರ.ಸ್ವ. ಶ್ರೀ ಮಹಂತಸ್ವಾಮಿಗಳು ಅಧಿಕಾರಕ್ಕೆ ಬಂದ ಮೂರೇ ಮೂರು ವರ್ಷದಲ್ಲಿ ಇಂಥ ದೊಡ್ಡ ಕಾರ್ಯ ನಡೆಸಿದ್ದು ಇಂದಿಗೂ ಜನರ ಮನಸ್ಸಿನ ಅಚ್ಚರಿಯ ಸೋಜಿಗದ ಸಂಗತಿಯಾಗಿದೆ. ದಿವಂಗತ ಡಿ.ಎಂ. ಸಿದ್ಧಯ್ಯನವರು ನಿಂತು ದೊಡ್ಡದಾದ ಚಪ್ಪರದ ವ್ಯವಸ್ಥೆ, ಪ್ರತ್ಯೇಕವಾದ ಊಟದ ವ್ಯವಸ್ಥೆ ಹಾಗೂ ಇತರ ಎಲ್ಲಾ ಕಾರ್ಯಕ್ರಮಗಳ ಉಸ್ತುವಾರಿ ಜವಾಬ್ದಾರಿ ಹೊತ್ತು ವ್ಯವಸ್ಥಿತವಾಗಿ ಮಾಡಿದರು. ಕಾರ್ಯಕ್ರಮವು 'ನ ಭೂತೋ ನಭವಿಷ್ಯತಿ" ಎನ್ನುವಂತೆ ಮಾಡಿದರು. ನಿಜಕ್ಕೂ ಇದೊಂದು ಚಿರಸ್ಮರಣೀಯವಾದ ಕಾರ್ಯಕ್ರಮವಾಗಿದೆ. ಇದನ್ನು ಕಣ್ಣಾರೆ ನೋಡಿ ಆನಂದಿಸಿರುವ ಜನ ಇಂದಿಗೂ ಈಕಾರ್ಯಕ್ರಮವನ್ನು ತಮ್ಮ ಸ್ಮೃತಿಪಟಲದಲ್ಲಿ ಶಾಶ್ವತವಾಗಿ ಚಿರಸ್ಥಾಯಿಯಾಗಿ ಉಳಿಸಿಕೊಂಡು ಮೆಲಕು ಹಾಕಿ ಸಂತೋಷ ಪಡುತ್ತಿದ್ದಾರೆ.

ದೇವನೂರು ಶ್ರೀ ಮಠದಲ್ಲಿ ಅನೇಕ ವರ್ಷಗಳಿಂದಿದ್ದು, ಕಂತೆ ಭಿಕ್ಷದ ಕಾಯಕ, ಅಡುಗೆ ಮನೆ ಕಾಯಕ ಮೊದಲಾದವುಗಳಲ್ಲಿ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿ, ಶ್ರೀಮಠದ ಏಳ್ಗೆಗಾಗಿ ದುಡಿದು ಇಲ್ಲಿಯೇ ಲಿಂಗೈಕ್ಯರಾದ ಪೂಜ್ಯಗುರುಳಾದ ಶ್ರೀ ದೊಂದ್ವಪ್ಪಸ್ವಾಮಿಗಳು, ಕಿತ್ತೂರುಂಡಿ ಶ್ರೀಗಳು, ಶ್ರೀನಿಲುಸೋಗೆ ಸ್ವಾಮಿಗಳವರು ಮತ್ತು ಪೂಜ್ಯ ಶ್ರೀ ಶಿವಬಸವಸ್ವಾಮಿಗಳು ಲಿಂಗೈಕ್ಯರಾದ ಬಳಿಕ (ದಿನಾಂಕಗಳ ಬಗ್ಗೆ ಸ್ಪಷ್ಟ ಮಾಹಿತಿ ದೊರಕಿಲ್ಲ) ಅವರ ಲಿಂಗಮಯ ಶರೀರಗಳನ್ನು ಶ್ರೀಮಠದಲ್ಲಿಯೇ, ನಿಕ್ಷೇಪಿಸಿ, ಗದ್ದುಗೆಗಳನ್ನು ಮಾಡಲಾಗಿದೆ. ಅನಂತರ ಎಲ್ಲಾ ಮಹನೀಯ ಗಣಾರಾಧನೆಯನ್ನು ಏರ್ಪಡಿಸಿ ಹಿರಿಯ ಎಲ್ಲ ಪೂಜ್ಯರಂತೆ ಇವರ ಈ ಗಣಾರಾಧನಾ ಮಹೋತ್ಸವನ್ನು ವಿಜೃಂಭಣೆಯಂತೆ ಸಹಸ್ರಾರು ಭಕ್ತರ ಸಾನ್ನಿಧ್ಯದಲ್ಲಿ ಮಾಡಲಾಯಿತು. ಇವುಗಳಲ್ಲದೆ ದೇವನೂರು ಮಠದಲ್ಲಿ ಪ್ರತಿವರ್ಷದ ಕಡೆ ಕಾರ್ತಿಕ ಸೋಮವಾರ ಮತ್ತು ಮಂಗಳವಾರದಂದು ನಿರಂತರವಾಗಿ ಕಾರ್ತಿಕ ಸೋಮವಾರದ ಆರಾಧನಾ ಮಹೋತ್ಸವಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಈ ಆರಾಧನಾ ಮಹೋತ್ಸವದಲ್ಲಿ ಭಾಗವಹಿಸುವ ಭಕ್ತರ ಸಂಖ್ಯೆಗೆ ಮಿತಿಯೇ ಇಲ್ಲ. ಪ್ರತಿವರ್ಷವೂ ಶಿವಾನುಭವಗೋಷ್ಠಿ, ಜಂಗಮೋತ್ಸವ, ಭಜನಾಮೇಳ, ಮಹಾದಾಸೋಹ ಮೊದಲಾದ ಕಾರ್ಯಕ್ರಮಗಳು ಬಹು ವಿಜೃಂಭಣೆಯಿಂದ ನಡೆಯುತ್ತಲೆ ಇವೆ. ಮೇಲಾಗಿ ಶ್ರೀ ಮಠದಲ್ಲಿ ಧನುರ್ಮಾಸ, ಮಹಾಶಿವರಾತ್ರಿಗಳಂದು ವಿಶೇಷವಾದ ಪೂಜೆ ಪುನಸ್ಕಾರಗಳು ನಡೆಯುತ್ತವೆ ಹೀಗೆ ದೇವನೂರು ಮಠದ ಇತಿಹಾಸವು ಕೇವಲ ನೂರೈವತ್ತು ಇನ್ನೂರು ವರ್ಷಗಳ ಒಳಗಿದ್ದರು. ಇಲ್ಲಿ ಅನೇಕ ಆರಾಧನಾ ಮಹೋತ್ಸವಗಳು ನಡೆದು ಶಿವಾನುಭವ ಗೋಷ್ಠಿಗಳ ಮೂಲಕ ಧರ್ಮ ಪ್ರಚಾರ ಕಾರ್ಯ ನಿರಂತರವಾಗಿ ನಡೆಸುತ್ತ ಎಲೆಮರೆಯ ಕಾಯಂತೆ ಶ್ರೀಮಠಸದಾ ಕಾರ್ಯ ತತ್ಪರವಾಗಿದೆ.

**ಸುತ್ತೂರುಮಠದ ಧಾರ್ಮಿಕ ಹಾಗೂ ಸಾಮಾಜಿಕ ಕೊಡುಗೆಗಳು :**

ಜಗದ್ಗುರು ಶ್ರೀಶಿವರಾತ್ರೀಶ್ವರಮಠವು ವೀರಶೈವಧರ್ಮವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಧರ್ಮ ಜಾಗೃತಿ ಮೂಡಿಸುವಲ್ಲಿ ಶ್ರೀ ಮಠವು ಮೊದಲ ಸ್ಥಾನದಲ್ಲಿದೆ. ಮೈಸೂರು ಪ್ರಾಂತ್ಯದ ಸುತ್ತ ಮುತ್ತ ಇರುವ ವೀರಶೈವ ಧರ್ಮದವರಿಗೆ ಲಿಂಗಾಧಾರಣೆಗಾಗಿ ಸಾಮೂಹಿಕದೀಕ್ಷಾ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಆ ಮೂಲಕ ಯುವಕರಲ್ಲಿ ಧರ್ಮದಬಗ್ಗೆ ಕಾಯಕದಬಗ್ಗೆ ಅರಿವು ಮೂಡಿಸುವಂತ ಕೆಲಸಮಾಡುತ್ತಿದೆ.

**ಸಾಮೂಹಿಕ ಧೀಕ್ಷೆ ಕಾರ್ಯಕ್ರಮ:**

ಸಾಮೂಹಿಕ ದೀಕ್ಷಾ ಕಾರ್ಯಗಳನ್ನು ಮೈಸೂರು ಜಿಲ್ಲೆಯಲ್ಲಿನ ಹಲವಾರು ವೀರಶೈವ ಮಠಗಳು ಬಹಳ ಹಿಂದಿನಿಂದಲೂ ನಡೆಸಿಕೊಂಡು ಬಂದಿರುವುದನ್ನು ನಾವು ಗಮನಿಸಬಹುದು. ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಶಿವಧೀಕ್ಷಾ ಪಡೆದವರಿಗೆ ಲಿಂಗಾಧಾರಣೆಯ ಅರಿವು ಮೂಡಿಸುವ ಕಾರ್ಯವನ್ನು ಮಾಡುತ್ತ ಈ ಸಮಾಜದ ಏಳಿಗೆಗೆ ಮತ್ತು ವೀರಶೈವ ಸಂಸ್ಕೃತಿಯ ಉಳಿವಿಗೆ ಸದಾ ಶ್ರಮಿಸುತ್ತಿರುವುದು ಕಂಡುಬರುತ್ತದೆ.

ಈ ಧೀಕ್ಷೆ ಎಂಬ ಪದಕ್ಕೆ ಕನ್ನಡ ನಿಘಂಟಿನಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ. ಧೀಕ್ಷೆಯು ಪವಿತ್ರ ಕಾರ್ಯಗಳಿಗಾಗಿ ಆರಂಭದಲ್ಲಿ ನಡೆಸುವ ಒಂದು ವಿಶೇಷ ಸಂಸ್ಕಾರ. ಇಂದೊಂದು ವ್ರತ ಅಥವಾ ನಿಯಮ ಉಪದೇಶವನ್ನು ನೀಡುವಂತಹದು. ಎನ್ನಲಾಗಿದೆ ಸಿದ್ಧಾಂತಶಿಖಾಮಣಿಯಲ್ಲಿ "ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಾ। ಯಸ್ಮಾದತಃ ಸಮಾಖ್ಯಾತಾ ಧೀಕ್ಷೇತಿಯಂ ವಿಚಕ್ಷಣೈಃ" ಎಂದಿದೆ. ಅಂದರೆ ಮಹಾಬೆಳಗನ್ನೊಳಗೊಂಡ ಶಿವನನ್ನು ಲಿಂಗಸ್ವರೂಪದ ಶಿವಜ್ಞಾನವನ್ನಿತ್ತು ದೇಹಿಯಲ್ಲಿರುವ ಮಲಪಾಶ ಬಂಧನಗಳನ್ನು ಬಿಡಿಸುವುದೇ ಧೀಕ್ಷೆ ಎನ್ನಲಾಗಿದೆ. ಲಕ್ಕಣದಂಡೇಶನು ತನ್ನ ಶಿವತತ್ವಚಿಂತಾಮಣಿಯಲ್ಲಿ ದೀಯತೇ ಎನೆ ಲಿಂಗ ಸಂಬಂಧ ತತ್‌ಕ್ಷಣಂ ಷೇಯತೇ–ಎನೆ ಮಲತ್ರಯ ಹರಣವದರಿಂದ ದೀಯತೇ ಕ್ಷೀಯತೇ ಎಂಬುಭಯ ಪದಯೋಗವೇ ಧೀಕ್ಷೆ ಎಂದೆನಿಪುದು ಎಂದಿದ್ದಾನೆ. ವಿಶೇಷಾರ್ಥಗಳಲ್ಲಿ ಧೀಕ್ಷೆ ಎನ್ನುವ ಪದಕ್ಕೆ ಒಂದು ಆಗಮಿಕ ವಿಧಿ, ಧಾರ್ಮಿಕ ಸಂಸ್ಕಾರ, ಗುರುವಿನಿಂದ ಪಡೆದ ಅನುಗ್ರಹ, ಗುರುಕಾರುಣ್ಯದ ಸಿದ್ಧಿಗಾಗಿ ಪಡೆದಧೀಕ್ಷೆ, ನಮಗೆ ದೇವರಿಗೂ ನಡುವಿನ ಸೇತುಬಂಧವೇ ಈ ಧೀಕ್ಷೆ ಎಂದು ನಾನಾ ರೀತಿಯಲ್ಲಿ ನಾವು ಅರ್ಥೈಸಬಹುದು.

ಗುರುವು ಧೀಕ್ಷಾ ಕಾಲದಲ್ಲಿ ತನ್ನ ಯೋಗ ಬಲದಿಂದ ಶಿಷ್ಯನ ಚೈತನ್ಯವನ್ನು ಗಟ್ಟಿಗೊಳಿಸಿ ಹೊರಗೆ ಇಷ್ಟಲಿಂಗವೆಂದು ಸ್ಥೂಲಶರೀರಕ್ಕೂ, ಒಳಗೆ ಪ್ರಾಣಲಿಂಗವೆಂದು ಸೂಕ್ಷ್ಮಶರೀರಕ್ಕೂ ಭಾವಲಿಂಗವೆಂದು ಕಾರಣ ಶರೀರಕ್ಕೂ ಜೋಡಿಸಿ ಅವುಗಳ ಅನುಸಂಧಾನ ಕ್ರಮವನ್ನು ತೋರಿಸಿಕೊಡುತ್ತಾನೆ. ಆದ್ದರಿಂದ ಇಲ್ಲಿ ಗುರುವಿಗೆ ಮಹತ್ವದ ಸ್ಥಾನವಿದೆ. ಧೀಕ್ಷೆಯಲ್ಲಿ ವೇದಾಧೀಕ್ಷೆ, ಮಂತ್ರಧೀಕ್ಷೆ, ಕ್ರಿಯಾಧೀಕ್ಷೆ ಎಂಬುದಾಗಿ ಮೂರು ಬಗೆಗಳಿವೆ. ಮತ್ತೆ ಧೀಕ್ಷೆಯನ್ನು ಕೊಡುವ ಗುರುವಿಗೂ ಹಾಗೂ ಪಡೆಯುವ ಶಿಷ್ಯನಿಗೂ ಕೆಲವು ನೀತಿ ನಿಬಂಧನೆಗಳಿವೆ. ಜೊತೆಗೆ ವೀರಶೈವರಲ್ಲಿ ಧೀಕ್ಷೆಯಾಗದೆ ಮೋಕ್ಷವಾಗದು ಎಂಬ ಮಾತಿದೆ ದಶಕರ್ಮಗಳಲ್ಲಿ ಒಂದಾದ ಧೀಕ್ಷೆಯು ಮೋಕ್ಷಕ್ಕೆ ಸಾಧನವೆಂಬುದು ಶಾಸ್ತ್ರಾಧಾರಿತ ನಂಬಿಕೆಯಾಗಿದೆ. ಸಾಮಾನ್ಯವಾಗಿ ಎಂಟುವರ್ಷ ತುಂಬುವುದರೊಳಗೆ ಧೀಕ್ಷೆಯಾಗಬೇಕೆಂಬುದು ನಿಯಮ. ವೈಶಾಖದಿಂದ ಪಾಲ್ಗುಣ ಮಾಸದವರೆಗೆ ಒಂದು ಶುಭಮಹೋರ್ತದೊಳಗೆ ಈ ವಿಧಿಯನ್ನು ನೆರವೇರಿಸಲಾಗುತ್ತದೆ. ಲಿಂಗಧಾರಣಾ ಧೀಕ್ಷೆಯು ಜಾತಿ, ಲಿಂಗ, ವರ್ಗಬೇಧವಿಲ್ಲದೆ ಹುಟ್ಟುವ ಪ್ರತಿಯೊಂದು ಗಂಡು ಹೆಣ್ಣಿಗೂ ಅನ್ವಯವಾಗುತ್ತದೆ. ಲಿಂಗದೀಕ್ಷಾ ವಿಧಾನವನ್ನು ಕುರಿತು ಸಂಗ್ರಹರೂಪದಲ್ಲಿ ಹೇಳುವುದಾದರೆ – ಪಂಚಕಳಸ ಸ್ಥಾಪನೆಮಾಡಿ ಸುತ್ತಲೂ ನೂಲು (ತಂತು) ಸುತ್ತಬೇಕು ನಾಲ್ಕು ದಿಕ್ಕಿನಲ್ಲಿ ಕಳಸವಿಡಬೇಕು. ಮಧ್ಯ ಒಂದುಕಳಸವಿಡುವುದು. ಈ ಪಂಚ ಕಳಸಗಳಿಗೆ ವಸ್ತ್ರ ಧರಿಸಬೇಕು. ಪಂಚರತ್ನ, ಸುವರ್ಣಾಧಿಗಳನ್ನು ಕಳಸಕ್ಕೆ ಹಾಕಬೇಕು. ತಳಿರು ತೋರಣಗಳಿಂದ ಅವುಗಳನ್ನು ಶೃಂಗರಿಸಿ ಸುಜಲವನ್ನು ತುಂಬಿ, ಪುಷ್ಪ ಭಸ್ಮ, ಗಂಧಾಕ್ಷತೆಗಳನ್ನು ಧರಿಸಬೇಕು. ಚೌಕಮಧ್ಯ ಶಿಷ್ಯನನ್ನು ಕುಳ್ಳರಿಸಬೇಕು. ಮಂಡಲದಲ್ಲಿ ಶಿಷ್ಯಕುಳಿತುಕೊಳ್ಳುವ ದಿಕ್ಕು ಅವನು ಯಾವವೇದದವನು ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಋಗ್ವೇದಿಯಾದರೆಪೂರ್ವಕ್ಕೆ, ಯಜುರ್ವೇದಿಯಾದರೆ ದಕ್ಷಿಣಕ್ಕೆ, ಸಾಮವೇದಿಯಾದರೆ ಪಶ್ಚಿಮಕ್ಕೆ, ಮತ್ತು ಅಥರ್ವಣವೇದಿಯಾದರೆ ಉತ್ತರದಿಕ್ಕಿನಲ್ಲಿ ಮಂಡಿಸಿರಬೇಕು. ಶಿವ ಪಂಚಾಕ್ಷರಿಯೊಂದಿಗೆ ಕಲಶಪೂಜೆ ಆರಂಭವಾಗುತ್ತದೆ. ಕಳಶಕ್ಕೆ ವೈಭವಯುತ ಪೂಜೆಗೈಯಬೇಕು. ದರ್ಭಾಗ್ರದಿಂದ ಕಲಶೋದಕವನ್ನು ಮೂರುಬಾರಿ ಅಭಿಷೇಕ ಮಾಡಿ ಕಲಶ ಯಥಾಸ್ಥಾನದಲ್ಲಿರಿಸಬೇಕು. ಶ್ರೀಗುರುವು ತನ್ನ ಹಸ್ತವನ್ನು ಶಿವನ ಕರವೆಂದು ಶಿಷ್ಯನ ತಲೆಯ ಮೇಲಿರಿಸಿ ಶಿರವೇ ಶಿವನ ಸಿಂಹಾಸನವೆಂದು ಮನದಲ್ಲಿ ಧ್ಯಾನಿಸಿ ಭಾವಪೂಜೆ ಮಾಡಿ ಶಿರದೊಳಗೆ ಶಿವನಿಹನೆಂದು ಕಿವಿಯಲ್ಲಿ ರಹಸ್ಯ ಪಂಚಾಕ್ಷರಿ ಬೋಧೆ ಕೊಡುವನು. ಶಿವಕಳೆಯನ್ನು ಲಿಂಗದಲ್ಲಿ ಸ್ಥಾಪಿಸಿ ಗುರುವು ಕರದಲಿಂಗವನ್ನು ಸ್ಮರಿಸಿ ಶಿಷ್ಯನಿಗೆ ಅರ್ಪಿಸುವುದು. ಧರ್ಮ ಸಂರಕ್ಷಣಾರ್ಥವಾಗಿಯೇ, ಸದಾ ಕಂಕಣ ಬದ್ಧವಾಗಿದ್ದ ಕೆಲವು ವೀರಶೈವ ಮಠಗಳಲ್ಲಿ ಲಿಂಗಧಾರಣಾ ದೀಕ್ಷಾವಿಧಿಯನ್ನು ಸಾಮೂಹಿಕವಾಗಿ ನೆರೆವೇರಿಸುವ ಸಂಪ್ರದಾಯವಿತ್ತು. ಈ

ಸಾಮೂಹಿಕ ದೀಕ್ಷಾ ಕಾರ್ಯಗಳನ್ನು ಶ್ರೀ ಸುತ್ತೂರುಮಠದ ಜೊತೆಗೆ ಜಿಲ್ಲೆಯ ಅನೇಕ ಮಠಗಳು ಪ್ರತಿವರ್ಷದಲ್ಲೂ ನಡೆಸುತ್ತ ಬಂದಿರುವುದನ್ನು ನಾವು ಗಮನಿಸಬಹುದು. ಧಾರ್ಮಿಕ ಸಭೆ ಮತ್ತು ಲಿಂಗಧೀಕ್ಷೆ ಕಾರ್ಯಕ್ರಮಗಳು ವರ್ಷಕ್ಕೆ ಎರಡು ಮೂರು ಬಾರಿಯಾದರು ಈ ಮಠಗಳ ಆಶ್ರಯದಲ್ಲಿ ನೆರವೇರಿಸುವುದನ್ನು ನಾವು ಗಮನಿಸಬಹುದು.

ಅಲ್ಲದೆ ಶ್ರೀಮಠದ ವತಿಯಿಂದ ಪ್ರತಿವರ್ಷ ಜನವರಿಯಿಂದ ಡಿಸೆಂಬರ್ ತಿಂಗಳಿನವರೆಗೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತ ಬಂದಿದೆ. ಶ್ರೀ ಮಠದಲ್ಲಿ (ಮೈಸೂರು ಶಾಖೆ) ಪ್ರತಿ ತಿಂಗಳು ಪೌರ್ಣಮಿಯ ದಿನದಂದು ಪ್ರಸಿದ್ಧ ಸಂಗೀತಾ ವಿದ್ವಾಂಸರಿಂದ ಬೆಳದಿಂಗಳ ಸಂಗೀತಾ ಕಾರ್ಯಕ್ರಮವನ್ನು ಕಳೆದ ಹಲವು ವರ್ಷಗಳಿಂದಲೂ ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಈ ದಿನದಲ್ಲಿ ವಿಶೇಷವಾಗಿ ರಾಜ್ಯ ಮತ್ತು ರಾಷ್ಟಮಟ್ಟದಲ್ಲಿ ಹೆಸರುವಾಸಿಯಾಗಿರುವ ಗಣ್ಯಾತೀಗಣ್ಯರಾದ ಸಂಗೀತಗಾರರನ್ನು ಕರೆತಂದು ಸಂಗೀತಾ ಸುಧೆ ಹರಿಸಿ ಅವರನ್ನು ಗೌರವಿಸುತ್ತ ಸಂಗೀತ ಕ್ಷೇತ್ರಕ್ಕೆ ಶ್ರೀಮಠವು ಅನನ್ಯ ಕೊಡುಗೆ ನೀಡುತ್ತಿರುವುದನ್ನು ನಾವು ಗಮನಿಸಬಹುದು. ಪ್ರತಿವರ್ಷ ಜನವರಿ ತಿಂಗಳ ೧೧ನೇ ತಾರೀಕಿನಂದು ಜಗದ್ಗುರು ಶ್ರೀ ಮಂತ್ರಮಹರ್ಷಿಗಳ ಪುಣ್ಯಾರಾಧನೆಯನ್ನು ಕಳೆದ ನಲವತ್ತೇಳು ವರ್ಷಗಳಿಂದಲೂ ಆಚರಿಸಿಕೊಂಡು ಬರುತ್ತಿದೆ. ಆದಿನಗಳಲ್ಲಿ ವಿಶೇಷ ಧಾರ್ಮಿಕ ಸಭೆ ಏರ್ಪಡಿಸಿ ಜ್ಞಾನಾನ್ನ ದಾಸೋಹದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಪ್ರತಿ ಜನವರಿ ತಿಂಗಳಲ್ಲಿ ಶ್ರೀಮಠದ ವತಿಯಿಂದ ಅದ್ದೂರಿಯಾಗಿ ಸುತ್ತೂರು ಜಾತ್ರಾಮಹೋತ್ಸವವು ಆರಂಭವಾಗಿ ಆರು ದಿನಗಳ ಕಾಲ ವಿಜ್ರುಂಭಣೆಯಿಂದ ನೆಡೆಯುತ್ತದೆ. ಹಾಲರವಿ ಉತ್ಸವ, ಶ್ರೀ ವೀರಭದ್ರೇಶ್ವರ ಕೊಂಡೋತ್ಸವ, ಶ್ರೀ ಸೋಮೇಶ್ವರಸ್ವಾಮಿ ಕುಂಭಾಭಿಷೇಕ ಮತ್ತು ಉತ್ಸವ ಹಾಗೂ ಸಾಮೂಹಿಕ ವಿವಾಹ ಶ್ರೀಸುತ್ತೂರು ರಥೋತ್ಸವ, ಕೊಂಡೋತ್ಸವ ಮತ್ತು ಐತಿಹಾಸ ಬೆಳಕನ್ನುಂಟು ಮಾಡುವ ತೆಪ್ಪೋತ್ಸವ ಮತ್ತು ಕೊನೆಯಲ್ಲಿ ಅನ್ನಬ್ರಹ್ಮೋತ್ಸವ ಈ ಸುತ್ತೂರು ಜಾತ್ರಾ ಸಂದರ್ಭದಲ್ಲಿ ವಿವಿಧ ರೀತಿಯಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಚಟುವಟಿಕೆಗಳು ನಡೆಯುತ್ತಿವೆ. ಧನಗಳಜಾತ್ರೆಯ ಏರ್ಪಡಿಸಿ ಉತ್ತಮ ರಾಸುಗಳಿಗೆ ಬಹುಮಾನ ನೀಡಲಾಗುತ್ತದೆ. ಅಲ್ಲದೆ ಈ ಜಾತ್ರೆಯಲ್ಲಿ ಪ್ರಸಿದ್ಧವಾದ ವಸ್ತುಪ್ರದರ್ಶನ ಇಲ್ಲಿ ಕಲೆ, ಸಾಹಿತ್ಯ, ಸಂಗೀತ ಮತ್ತು ಕೃಷಿಗೆ ಸಂಬಂಧಿಸಿ ಅನೇಕ ಮಾದರಿಗಳನ್ನು ರೈತರಿಗೆ ಪರಿಚಯಿಸಲಾಗುತ್ತದೆ. ಇದೆ ಸಂದರ್ಭದಲ್ಲಿ ನಾಡಿನ ಪ್ರಸಿದ್ಧ ಮಠಾಧೀಶರು ಮತ್ತು ಚಿಂತಕರಿಂದ ಧಾರ್ಮಿಕ ಉಪನ್ಯಾಸ ಗೋಷ್ಠಿ ಏರ್ಪಡಿಸಲಾಗುತ್ತದೆ. ಅಲ್ಲದೆ ಕಲೆ ಉಳಿವಿಗಾಗಿ ಧ್ವನಿಬೆಳಕು ಕಾರ್ಯಕ್ರಮ ಪ್ರತಿನಿತ್ಯ ಒಂದೊಂದು ಪೌರಾಣಿಕ ನಾಟಕ ಏರ್ಪಡಿಸುವ ಮೂಲಕ ಮಠವು ಕಲಾರಾಧನೆಯಲ್ಲಿ ಮುಂಚೂಣಿಯಲ್ಲಿದೆ. ಅಲ್ಲದೆ ಈ

ಸಂದರ್ಭದಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಿ ಸರಳವಿವಾಹಕ್ಕೆ ಪ್ರೋತ್ಸಾಹ ನೀಡುತ್ತಿದೆ. ಅದಕ್ಕಾಗಿಯೇ ಶ್ರೀಮಠದಲ್ಲಿ ಶ್ರೀ 'ವೀರಶೈವರ ವಧೂವರರ ವೇದಿಕೆ' ಅಸ್ತಿತ್ವದಲ್ಲಿದೆ. ತೆಪ್ಪೋತ್ಸವದ ದಿನ ಸಿಡಿಸುವ ಸಿಡಿಮದ್ದು ಮತ್ತು ಪಟಾಕಿಗಳ ಚಿತ್ತಾರ ಭಕ್ತರ ಮನದಲ್ಲಿ ಹಚ್ಚಳಿಯದಂತಿದೆ. ಈ ಜಾತ್ರಾ ದಿನಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದಂತಹ ಸಾಧಕರನ್ನು ಗೌರವಿಸುವ ಮಹತ್ಕಾರ್ಯವನ್ನು ಶ್ರೀಮಠವು ನಡೆಸಿಕೊಂಡು ಬರುತ್ತಿದೆ.

ಪ್ರತಿ ತಿಂಗಳ ಹತ್ತನೇತಾರೀಖಿನಂದು ಶ್ರೀಮಠ ಸುತ್ತೂರುಕ್ಷೇತ್ರದಲ್ಲಿ 'ಸಾಮೂಹಿಕವಿವಾಹ' ಏರ್ಪಡಿಸಿರುತ್ತಾರೆ. ಪ್ರತಿ ಅಮವಾಸ್ಯೆಯ ದಿನಗಳಲ್ಲಿ ವಿಶೇಷ ಪೂಜೆ ಏರ್ಪಡಿಸಿ ಅನ್ನದಾಸೋಹ ನಡೆಸುತ್ತಾರೆ. ಮೇ ತಿಂಗಳಲ್ಲಿ ಈ ಪೀಠದ ಪ್ರಸಿದ್ಧ ಜಗದ್ಗುರು ಶ್ರೀ ಮಂತ್ರಮಹರ್ಷಿಗಳ ಜಯಂತಿಯನ್ನು ಪ್ರತಿವರ್ಷ ಧಾರ್ಮಿಕ ಸಭೆ ಸಮಾರಂಭ ಏರ್ಪಡಿಸುವ ಮೂಲಕ ಅದ್ದೂರಿಯಾಗಿ ಆಚರಿಸಲಾಗುತ್ತಿದೆ.

ಜುಲೈ ತಿಂಗಳಲ್ಲಿ ಶ್ರಾವಣ ಮಾಸದಲ್ಲಿ ವಿಶೇಷ ಪೂಜಾರಂಭ ಮೈಸೂರು ಮತ್ತು ಸುತ್ತೂರು ಮಠದಲ್ಲಿ ಏಕಕಾಲಕ್ಕೆ ಆರಂಭವಾಗುತ್ತದೆ. ಈ ಸಂದರ್ಭದಲ್ಲಿ ವಿಶೇಷ ಪ್ರವಚನ ಏರ್ಪಡಿಸಿ ಶರಣಭಕ್ತರ ಧಾರ್ಮಿಕ ಹಸಿವನ್ನು ಹಿಂಗಿಸುವ ಕಾರ್ಯ ಮಾಡುತ್ತಿದೆ.

ಆಗಸ್ಟ್ ತಿಂಗಳು ಸುತ್ತೂರು ಮಠದಲ್ಲಿ ಮರೆಯಲಾರದ ತುಂಬಾ ಮುಖ್ಯವಾದ ಮಾಸ ಈ ಮಾಸದಲ್ಲೆ ಈ ಸುತ್ತೂರು ಪೀಠದ ೨೩ನೇ ಜಗದ್ಗುರುಗಳಾದ ಶ್ರೀ ಜಗದ್ಗುರು ಡಾ. ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಮಹೋತ್ಸವ **(೨೯-೦೮-೨೦೧೫ ರಿಂದ ೨೦೧೬-೦೮-೨೯ ರ ತನಕ ಇವರ ಜನ್ಮಶತಮಾನೋತ್ಸವ ಆಚರಣೆ ಹಮ್ಮಿಕೊಳ್ಳಲಾಗಿದೆ.)** ಆಗಸ್ಟ್ ೨೯ನೇ ತಾರೀಕಿನಂದು ಆಚರಿಸಲಾಗುತ್ತದೆ. ಕಾಯಕ ತಪಸ್ವಿಗಳಾದ ಈ ಶ್ರೀಗಳ ಜಯಂತಿಯನ್ನು ಸಂಸ್ಥೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಧಾರ್ಮಿಕ ಚಟುವಟಿಕೆಗಳ ಮೂಲಕ ಆಚರಿಸುತ್ತಾರೆ.

ನವೆಂಬರ್ ತಿಂಗಳ ೨೬ನೇ ದಿನಾಂಕದಂದು ಈ ಕಾಯಕ ತಪಸ್ವಿಗಳಾದ ಡಾ. ರಾಜೇಂದ್ರಸ್ವಾಮಿಗಳ ಪುಣ್ಯಾರಾಧನೆ ಆಚರಿಸಲಾಗುತ್ತದೆ. ಅಲ್ಲದೆ ಈ ತಿಂಗಳಲ್ಲಿ ಬರುವ ಕಾರ್ತಿಕ ಮಾಸಪೂಜಾರಾಂಭವಾಗುತ್ತದೆ. ಈ ಸಂದರ್ಭದಲ್ಲಿ ಶ್ರೀಶಿವರಾತ್ರಿಡಾ.ರಾಜೇಂದ್ರಸ್ವಾಮಿಗಳವರ ಸಂಸ್ಮರಣ ಸಂಗೀತಸಮ್ಮೇಳನ ಆರಂಭವಾಗುತ್ತದೆ. ಹಾಗೂ ಕಾರ್ತಿಕಮಾಸದ ನಂತರ ಬರುವ ಶಿವದೀಪೋತ್ಸವ ಕಾರ್ಯಕ್ರಮವನ್ನು ಧಾರ್ಮಿಕ ವಿಧಿವಿಧಾನಗಳಿಗನುಗುಣವಾಗಿ ಆಚರಿಸಲಾಗುತ್ತದೆ. ನಂತರದ ದಿನಗಳಲ್ಲಿ ಶ್ರೀಮಠದಲ್ಲಿ ಧನುರ್ಮಾಸ ವಿಶೇಷ ಪೂಜಾರಂಭವಾಗಿ ಒಂದು ತಿಂಗಳ ಕಾಲ ವಿಶೇಷ ಪೂಜೆ ಕಾರ್ಯಕ್ರಮ ನೆರವೇರುತ್ತದೆ.

ಧನುರ್ಮಾಸ ಮುಗಿಯುತ್ತಿದ್ದಂತೆ ಶ್ರೀಮಠದ ಇತಿಹಾಸವನ್ನು ಸಾರುವ ಆದಿಜಗದ್ಗುರು ಶ್ರೀಶಿವರಾತ್ರೀಶ್ವರರ (೧೦೫೫) ಜಯಂತಿ ಮಹೋತ್ಸವ ಪ್ರಾರಂಭವಾಗುತ್ತದೆ. ಮೂಲದಲ್ಲಿ ಶ್ರೀ ಸುತ್ತೂರಿನಲ್ಲೆ ಆಚರಿಸುತ್ತಿದ್ದ, ಈ ಜಯಂತಿ ಮಹೋತ್ಸವ ನಂತರದಿನಗಳಲ್ಲಿ ಮೈಸೂರು, ಬೆಂಗಳೂರು, ಗುಂಡ್ಲುಪೇಟೆ, ತಿ.ನರಸೀಪುರ, ಚಾಮರಾಜನಗರ, ಯಳಂದೂರು, ನಂಜನಗೂಡು ಪಿರಿಯಾಪಟ್ಟಣ, ಕೃಷ್ಣರಾಜನಗರ, ಹುಣಸೂರು ಮುಂತಾದ ಕಡೆಗಳಲ್ಲೂ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಆಯಾ ಪರಿಸರ ಸಾಹಿತ್ಯ ಕಲೆ ಧರ್ಮ ಪರಿಚಯಿಸುವುದರ ಜೊತೆಗೆ ನಾಡಿನ ಪ್ರಖ್ಯಾತಿ ವಿದ್ವಾಂಸರಿಂದ ಧಾರ್ಮಿಕ ಗೋಷ್ಠಿ ಮತ್ತು ಚಿಂತನ ಕಾರ್ಯಕ್ರಮ ಸಾಮಾಜಿಕ ಬದುಕಿನ ಚಿತ್ರಣ ಮತ್ತು ನಾಗರೀಕ ಸಮಾಜ ನಿರ್ಮಾಣದ ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತದೆ.

ಅಲ್ಲದೆ ಫೆಬ್ರವರಿ ತಿಂಗಳಲ್ಲಿ ಮುಡುಕುತೊರೆಯ ಜಾತ್ರೆಯ ನಂತರ ಶ್ರೀ ಮಠದ ಶಾಖಾಮಠವಾದ 'ನಾಡಮಠದಲ್ಲಿ" ಪ್ರತಿವರ್ಷ ಧಾರ್ಮಿಕ ಸಭೆನಡಿಸಿ ಸಮಾಜಿಕ ಅರಿವನ್ನು ಮೂಡಿಸುತ್ತಿದ್ದಾರೆ.

ಮೇಲ್ಕಂಡ ಮಠಗಳಲ್ಲದೆ ಮೈಸೂರು ಜಿಲ್ಲೆಯ ಸುತ್ತ ಇರುವಂತಹ ಎಲ್ಲಾ ವೀರಶೈವ ಮಠಗಳು ಇಂದಿಗೂ ತಮ್ಮ ವ್ಯಾಪ್ತಿಯಲ್ಲಿನ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ ವೀರಶೈವ ಧರ್ಮದ ಬೆಳವಣಿಗೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತಿವೆ.

ಆರ್ಥಿಕವಾಗಿ ಸದೃಢವಲ್ಲದ ಅನೇಕ ಮಠಗಳೂ ಸಹ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆಯುವ ಮದುವೆ, ನಾಮಕಾರಣ ಮತ್ತು ಕಲ್ಯಾಣಕಾರ್ಯಗಳ ಜೊತೆಗೆ ಅಂತ್ಯಸಂಸ್ಕಾರದಂತಹ ಕಾರ್ಯಗಳನ್ನು ನಡೆಸಿ ಕೊಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂಥ ಸಂದರ್ಭದಲ್ಲಿ ಸುತ್ತಲಿನ ಮಠಾಧೀಶರಲ್ಲಿ ಒಂದೆಡೆ ಸೇರಿ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಚರ್ಚಿಸುತ್ತಾರೆ. ಬೆಟ್ಟದಪುರ, ವಾಟಾಳು, ಕುಂದೂರಮಠ, ಕುದೇರು ಮಠ ಮತ್ತು ಉಕ್ಕಲಗೆರೆ ಮದ್ದಾಗ್ಗರಲಿಂಗಯ್ಯನಹುಂಡಿ ಪಟ್ಟದಮಠ ಮುಂತಾದ ಅನೇಕ ಮಠಗಳು ಶ್ರಾವಣ ಮಾಸದಲ್ಲಿ ಮತ್ತು ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆ ಮತ್ತು ಪ್ರವಚನ ಕಾರ್ಯ ಕ್ರಮವನ್ನು ಏರ್ಪಡಿಸಿ ಸುತ್ತಲಿನ ಜನಕ್ಕೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಅರಿವನ್ನು ಮೂಡಿಸುವ ಕಾರ್ಯವನ್ನು ಮಾಡುತ್ತಿವೆ. ಅಲ್ಲದೆ ಎಲ್ಲಾ ವೀರಶೈವ ಮಠಗಳು ಪ್ರತಿವರ್ಷ ತಮ್ಮ ಮಠದಲ್ಲಿ ಲಿಂಗೈಕ್ಯರಾದ, ಸಂಸ್ಥಾಪಕರ ವಾರ್ಷಿಕ ಜಯಂತಿ ಮತ್ತು ಆರಾಧನಾ ಮಹೋತ್ಸವವನ್ನು ಆಚರಿಸುತ್ತ, ಅಂತಹ ದಿನಗಳಲ್ಲಿ ಧಾರ್ಮಿಕ ಗೋಷ್ಠಿ ಮತ್ತು ಅನ್ನದಾಸೋಹ ಕಾರ್ಯಕ್ರಮ ಏರ್ಪಡಿಸಿ ವೀರಶೈವಧರ್ಮ ಚಿಂತನೆಯನ್ನು

ಜನರಲ್ಲಿ ಮೂಡಿಸುವ ಕಾರ್ಯ ಮಾಡುತ್ತವೆ. ಸುತ್ತಲೂ ಇರುವ ಗ್ರಾಮಗಳಲ್ಲಿ ಹಬ್ಬ ಜಾತ್ರೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತ ನ್ಯಾಯ ತೀರ್ಮಾನ ವೀರಶೈವ ಧರ್ಮದವರಿಗೆ ವಟುಧೀಕ್ಷೆ ಮತ್ತು ಲಿಂಗಧೀಕ್ಷೆ ಕಾರ್ಯಕ್ರಮ ಏರ್ಪಡಿಸುತ್ತವೆ. ಈ ಮೂಲಕ ವೀರಶೈವ ಧರ್ಮದ ಉಳಿವಿಗೆ ಕಾರಣರಾಗಿ ಮತ್ತು ಆಪ್ರಾಂತ್ಯದಲ್ಲಿ ಶಾಂತಿ ನೆಲೆಸುವಂತೆ ಸರ್ವಧರ್ಮದವರನ್ನು ಉದ್ಧರಿಸುವ ಕೆಲಸವನ್ನು ಈ ಮಠಗಳು ಮಾಡುತ್ತಿರುವುದನ್ನು ನಾವು ಕಾಣಬಹುದು. ಈ ರೀತಿಯಾಗಿ ವೀರಶೈವ ಮಠಗಳು ಸಮಾಜದಲ್ಲಿನ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅರಿವನ್ನು ಮೂಡಿಸುವ ಮೂಲಕ ಸದೃಢ ಸಮಾಜದ ನಿರ್ಮಾಣಕ್ಕೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು.